# ದಾನ ಚಿಂತಾಮಣಿ ಸಂತಾನ

## ಕುಟುಂಬ ಶಿಲ್ಪಿ ರತ್ನಮ್ಮನವರು

ಮೂಡಬಿದಿರೆ ಜೈನಕಾಶಿ. ಇಲ್ಲಿ ವಿಶ್ವಕವಿ ರತ್ನಾಕರ ಜನಿಸಿ ಕಾಶಿಗೆ ಕಿರೀಟ ತೊಡಿಸಿರುವನು. ಧವಳಗ್ರಂಥದ ಏಕಮಾತ್ರ ಪ್ರತಿಯನ್ನು ಮೂಡಬಿದಿರೆಯ ಜೈನ ಮಠ ಸಂರಕ್ಷಿಸಿಜೈನ ಆಗಮವನ್ನುಳಿಸಿದೆ. ನವರತ್ನಗಳ ಅಪೂರ್ವ ಜಿನಬಿಂಬಗಳಿರುವುದೂ ಆ ಮಹಾಕ್ಷೇತ್ರದಲ್ಲೇ . ಇಂಥ ಪವಿತ್ರಕ್ಷೇತ್ರದಲ್ಲಿ ಜನಿಸಬೇಕಾದರೂ ಪೂರ್ವಪುಣ್ಯವಿರಬೇಕಲ್ಲವೆ ? ತಮನಂಗಡಿ ಸಂಕಪ್ಪಶೆಟ್ಟರೂ ಇವರ ಅರ್ಧಾಂಗಿನಿ ಅನಂತಮತಿಯವರೂ ಈ ಕ್ಷೇತ್ರದಲ್ಲಿ ಸಜ್ಜಾತಿಯಲ್ಲಿ ಜನಿಸಿ ಸದ್ಗೃಹಸ್ಥರಾಗಿದ್ದರು. ಕಾಶಿಗೆ ಭಾಗೀರಥಿಯಾಗಿ ಇವರು ಬಾಳಿದರು. ಇರವ ಮನೆಯಲ್ಲಿ ಜಿನಬಿಂಬವನ್ನೂ ಪ್ರತಿಷ್ಠಾಪನೆ ಮಾಡಿದ್ದರು. ಶೆಟ್ಟರು ಈ ಬಿಂಬಕ್ಕೆ ಭಕ್ತಿಯಿಂದ ದಿನವೂ ಅಷ್ಟ ವಿಧಾರ್ಚನೆ ಮಾಡುತ್ತ ಮೈಮರೆಯುತ್ತಿದ್ದರು. ಶ್ರೀಮತಿ ಅನಂತಮತಿಯವರೂ ಪತಿಗೆ ಪೂಜಾಪರಿಕರಗಳನ್ನು ಒದಗಿಸುತ್ತಿರುವಾಗ ಮಕ್ಕಳೆಲ್ಲರೂ ಜಿನಸ್ತುತಿ ಹಾಡುತ್ತಾ ಸರಾಗಸಮ್ಯಕ್ತ್ವಕ್ಕೆ ಸಾಣೆಯಿಡುತ್ತಿದ್ದರು. ಇವರ ಮನೆಯು ಅಭಿನವ ಸಮವಸರಣವಾಗಿದ್ದಿತು. ಅತಿಥಿ ಅಭ್ಯಾಗತರಿಗೆ ಈ ಮನೆ ಅಲೆಮನೆಯಾಗಿದ್ದಿತು.

ಮಾತೃಶ್ರೀ ರತ್ನಮ್ಮನವರು ಶ್ರೀ ಸಂಕಪ್ಪಶೆಟ್ಟರು ಹಾಗೂ ಶ್ರೀಮತಿ ಅನಂತಮತಿಯರ. ಪುತ್ರಿ. ಧಾರ್ಮಿಕ ಪರಿಸರದಲ್ಲೇ ಈ ಕನ್ಯಾರತ್ನವು ಕೌಸ್ತುಭರತ್ನವಾಯಿತು. ಜೈನಧರ್ಮವನ್ನೇ ಉಸಿರಾಡುತ್ತಾ ಇವರು ಸಜೀವರತ್ನವಾಗಿ ಬೆಳೆದರು. ಮಾತಾಪಿತರು. ಈ ಜೀವರತ್ನಕ್ಕೆ ವಿಶ್ವಾನುಕಂಪವನ್ನು ತೊಡಿಸಿದರು. ವಿಶ್ವಮೈತ್ರಿಯನ್ನು ಉಡಿಸಿದರು. ಜಿನಭಕ್ತಿಯನ್ನೇ ಅಡಿಯಿಂದ ಮುಡಿತನಕ ತುಂಬಿ ತುಳುಕಾಡಿಸಿದರು. ಸರಾಗಸಮ್ಯಕ್ತ್ವದ ಒಪ್ಪಹಾಕಿದರು. ಕಾರಣಕನ್ಯೆಯಾಗುವಂತೆ ಆಶೀರ್ವಾದ ಮಾಡಿದರು.

ರತ್ನಮ್ಮನವರು ಜೈನಕಾಶಿಯ ಜೈನ ಪ್ರೌಢಶಾಲೆಯಲ್ಲಿ ಲೌಕಿಕ ಶಿಕ್ಷಣ ಪಡೆದರು. ಮೊರೇನಾದ ಜೈನ ಬಾಲಿಕಶ್ರಮದಲ್ಲಿ ಧಾರ್ಮಿಕಶಿಕ್ಷಣ ಪಡೆದ ಶ್ರೀಮತಿ ಶಿವದೇವಮ್ಮನವರು ಸಿದ್ಧಕಟ್ಟೆಯಲ್ಲಿ ನೆಲೆಸಿದ್ದರು. ರತ್ನಮ್ಮನವರು ಇವರ ಬಳಿ ತಂಗಿ ಜೈನ ಧಾರ್ಮಿಕ ಗ್ರಂಥಗಳನ್ನು ಅಭ್ಯಾಸ ಮಾಡಿದರು. ದಶಧರ್ಮಗಳನ್ನು ಮೈಗೂಡಿಸಿ ಕೊಂಡರು. ಇಹಪರವೆರಡರಲ್ಲೂ ಸಮತೋಲನ ತರಲು ಅವತರಿಸಿದ ಮಹಾಚೇತನವಾದರು. ಶಿವದೇವಮ್ಮನವರು ಇವರ ಸರಾಗಸಮ್ಯಕ್ತ್ವಕ್ಕೆ ಸ್ವನಸೇಮೆಯ ದೀಕ್ಷೆಯನ್ನು ತೊಡಿಸಿದರು.

ಮಾತನಾಡುವ ಮಂಜುನಾತನೇಂದೇ ಖ್ಯಾತಿ ಪಡೆದಿದ್ದ ಪೂಜ್ಯ ಮಂಜಯ್ಯ ಹೆಗ್ಗಡೆಯವರು ಈ ಕನ್ಯಾಕೌಸ್ತುಭವನ್ನು ಧರ್ಮಸ್ಥಳದ ಭಾವೀ ಹೆಗ್ಗಡೆಯವರಾದ ರತ್ನವರ್ಮರಿಗೆ ತಂದುಕೊಂಡು ವಿವಾಹ ಮಾಡಿದರು. ಜೈನಕಾಶಿಯಲ್ಲಿ ಜನಿಸಿದ ರತ್ನಮ್ಮನವರು ವಿಶ್ವಪ್ರಿಯಾಗವೆನಿಸಿದ ಧರ್ಮಸ್ಥಳದ ಸೊಸೆಯಾದರು ! ಸರ್ವ ಧರ್ಮ ಸಮನ್ವಯ ಸೂತ್ರವೇ ಇವರ ಮಂಗಳ ಸೂತ್ರವಯಿತು. ಜನಹಿತವೇ ಇವರ ತಿಲಕವಾಯಿತು. ವಿಶ್ವಾನುಕಂಪ ಮತ್ತು ವಿಶ್ವಮೈತ್ರಿಗಳೇ ಇವರ ಓಲೆ ಭಾಗ್ಯವಾಯಿತು.

೧೯೫೫ರಲ್ಲಿ ಪೂಜ್ಯ ರತ್ನವರ್ಮ ಹೆಗ್ಗಡೆಯವರು. ಧರ್ಮಸ್ಥಳದ ಧರ್ಮಾಧಿಕಾರಿಯಾದರು. ಆಗ ಮಾತೃಶ್ರೀ ರತ್ನಮ್ಮನವರು ಹೆಗ್ಗಡೆತಿಯಾದರು. ಈ ಕಾರಣಪುರಷರಿಗೆ ಚಿ ॥ ರಾ॥ ವೀರೇಂದ್ರ ಕುಮಾರ್, ಸುರೇಂದ್ರ ಕುಮಾರ್, ಹರ್ಷೇಂದ್ರ, ಕಮಾರ್, ರಾಜೇಂದ್ರ ಕುಮಾರ್ ಎಂಬ ಪುತ್ರ ರತ್ನರೂ ಕು ॥ ಪದ್ಮಲತಾ ಎಂಬ ಪುತ್ರಿಯೂ ಜನಿಸಿ ಧರ್ಮಸ್ಥಳ ಕ್ಷೇತ್ರದಲ್ಲಿ ಪಂಚಾಶ್ವರ್ಯವಾದಂತಾಯಿತು. !ಹಿಂದೆಂದೂ ಧರ್ಮ ಸ್ಥಳದ ಹೆಗ್ಗಡೆ ಪರಂಪರೆಯಲ್ಲಿ ಇಷ್ಟೊಂದು ಸಂತಾನ ಸಮೃದ್ಧಿಯಾಗಿಲಿಲ್ಲ.

ರತ್ನಮ್ಮನವರು ಮೇಲುನೋಟಕ್ಕೆ ಐವರ ಜನನಿಯಾದರೂ ಬಂಧುವರ್ಗದಲ್ಲಿ ಬಡವರಾಗಿದ್ದವರ ಹೆಣ್ಣು ಮಕ್ಕಳನ್ನು ಪ್ರತಿ ವರ್ಷವೂ ತಾವೇ ಕರೆಸಿಕೊಂಡು ಅವರಿಗೂ ವಿದ್ಯೆ ಬುದ್ಧಿ ಕಲಿಸಿದರು. ಸಾತ್ವಿಕ ಸಂಸ್ಕಾರ ಕೊಟ್ಟರು. ಮನೆಗೆಲಸ ಹೇಳಿಕೊಟ್ಟರು. ಅವರಿಗೂ ತಮ್ಮ ಖರ್ಚಿನಿಂದ ಅನುರೂಪ ವರರತ್ನಗಳನ್ನು ಹುಡುಕಿ ಮದುವೆಮಾಡಿ, ಆ ಎಲ್ಲ ಹೆಣ್ಣು ಮಕ್ಕಳಿಗೂ ತೌರನ್ನು

ನಡೆಸುತ್ತಿರುವರು. ಇವರ ಕುಟುಂಬವೆಂದರೆ ವಿಶ್ವಕುಟುಂಬವೇ ಆಗಿದೆ. ಬೆಳಗಿನಿಂದ ಸಂಜೆಯ ತನಕ ಪ್ರತಿ ದಿನ ನೂರಾರು ದೀನ ದಲಿತರು ಇವರನ್ನು ಕಂಡು ತಮ್ಮ ಕಷ್ಟಕಾರ್ಪಣ್ಯ. ಹೇಳಿ ಕಂಬನಿ ಮಿಡಿಯವರು. ಅವರೆಲ್ಲರ ಕಂಬನಿಯನ್ನು ಒರೆಸಿ ಅವರಿಗೆ ಧನಕನಕ ವಸ್ತ್ರಗಳನ್ನು ಕೊಟ್ಟು ಸಂತೈಸುವುದೇ ಈ ಕಾರಣ ಕನ್ಯಯ ಕಾಯಕವಾಗಿದೆ. 'ಮದರ್ ತೆರೆಸಾ'ಮಾಡಿದ ಸೇವೆ ಪತ್ರಿಕೆ ಗಳಲ್ಲಿ ಪ್ರಚಾರವಾದರೆ ಮಾತೃಶ್ರೀ ರತ್ನಮ್ಮನವರ ಸೇವೆ ಪ್ರಚಾರವಾಗಲಿಲ್ಲ. ಇವರಿಗೆ ಪ್ರಚಾರವೂ ಬೇಕಿಲ್ಲ. ಇವರು ಗುಪ್ತ ಭಕ್ತರು. ತಾಯಿ ತನ್ನ ಮಕ್ಕಳನ್ನು ಆರೈಕೆ ಮಾಡಿದ್ದನ್ನು ಡಂಗುರ ಸಾರುವಳೇನು ? ಇವರ ಸನ್ನಿಧಿಯಲ್ಲಿ ಬೆಳೆದವರೆಲ್ಲರೂ ಭವ್ಯಾತ್ಮರಾಗಿರುವರು, ವಿಶ್ವಾನುಕಂಪದ ಜೀವಂತ ಪುತ್ಥಳಿಗಳಾಗಿರುವರು. ವಿಶ್ವಮೈತ್ರಿಯ ಸಾಕಾರ ಪಡೆದಿರುವರು. ಸರಾಗ ಸಮ್ಯಕ್ತ್ವದ ಸಸಿಗಳಾಗಿ ಪ್ರಬುದ್ಧಮಾನಕ್ಕೆ ಬರುತ್ತಿರುವರು, ನೂರಾರು ಮಕ್ಕಳಿಗೆ ಇವರು ತಾಯ್ಗರುಳಾಗಿ, ವಿಶ್ವಕುಟುಂಬಿಯಾಗಿ, ಎಲೆಮರೆಕಾಯಾಗಿ, ಮೂರ್ತಿವೆತ್ತ ವಿನಯ ಸಂಪನ್ನತೆಯಾಗಿ ,ಗೂಢಭಕ್ತರಾಗಿ ಪ್ರಾಚಾರಕ್ಕೆ ಎಂದೂ ಅವಕಾಶಕೊಡೆದೆ ಬಾಳುತ್ತಿರುವರು.

ಇವರು ತಮ್ಮ ಐದು ಮಂದಿ ಮಕ್ಕಳಿಗೂ ದಯಾ ದಾಕ್ಷಿಣ್ಯದ ಅಸ್ತಿವಾರ ಹಾಕಿರುವರು. ಸರಾಗಸಮ್ಯಕ್ತ್ವದ ಸಾಣೆಯಿಟ್ಟಿರುವರು. ಧರ್ಮಾನುರಾಗದ ಒಪ್ಪಹಾಕಿರುವರು. ಈ ಮಕ್ಕಳು ಜೀವದಯೆಯನ್ನೇ ಉಸಿರಾಡುತ್ತಿರುವರು. ಈತಾಯಿ ಸದಾ ಮಕ್ಕಳ ಚಲನವಲನದ ಬಗ್ಗೆ ಒಂದು ಕಣ್ಣು ಇಟ್ಟು ಇವರನ್ನು ವಿಶ್ವನುಕಂಪದ ಜೀವರತ್ನ ಗಳಾಗುವಂತೆ ರೂಪಿಸಿರುವರು. ವಿಶ್ವಮೈತ್ರಿಯ ಸಾಕಾರವಾಗುವಂತೆ ಸಾಕಿರುವರು. ಸರ್ವಧರ್ಮ ಸಹಿಷ್ಣುತೆಯೇ ಧರ್ಮಸ್ಥಳದ ಜೀವಾಳ. ಜೈನ ಅನೇಕಾಂತವೇ ಇವರ ಬಂಡವಾಳ. ತಮ್ಮ ಮಕ್ಕಳಲ್ಲೂ ಅಹಿಂಸೆ ಅಪರಿಗ್ರಹ ಅನೇಕಾಂತಗಳ ತ್ರಿವೇಣೀ ಸಂಗಮವಾಗುವಂತೆ ನೋಡಿಕೊಂಡಿರುವರು. ಮಹಾಮಾತೆಯಾದ ರತ್ನಮ್ಮನವರು ಅಪೂರ್ವ ಕುಟುಂಬ ಶಿಲ್ಪಿಯಾಗಿ ತಮ್ಮ ಮಕ್ಕಳನ್ನು ಜಂಗಮ ಜಗದೋದ್ಧಾರಕರಾಗುವಂತೆ ಕಡೆದು ಲೋಕಕ್ಕೆ ಅರ್ಪಿಸಿರುವರು.

ರತ್ನಮ್ಮನವರ ದಿವ್ಯ ಪ್ರೇರಣೆಯಂತೆ ಪೂಜ್ಯ ರತ್ನವರ್ಮ ಹೆಗ್ಗಡೆಯವರು ಗೊಮ್ಮಟಮೂರ್ತಿಯ ನಿರ್ಮಾಣವನ್ನು ಕೈಗೆತ್ತಿಕೊಂಡರು. ಶ್ರೀ ರೆಂಜಾಳ ಗೋಪಾಲ ಶೆಣ್ಯೆರವರು

ಕಾರ್ಕಳದ ರಾಮಸಮುದ್ರದ ತಡಿಯಲ್ಲಿ ಹೆಬ್ಬಂಡೆಯನ್ನು ಕಿತ್ತು ಮೂರ್ತಿ ಕೆಡೆಯಲು ಕಂಕಣ ತೊಟ್ಟರು. ೧೯೬೭ರಲ್ಲಿ ಈ ಕಾರ್ಯ ಪ್ರಾರಂಭವಾಯಿತು. ಆದರೆ ೧೯೬೮ರಲ್ಲಿ ಪೂಜ್ಯ ರತ್ನವರ್ಮಾ ಹೆಗ್ಗಡೆಯವರು ಸ್ವರ್ಗಸ್ಥರಾದರು. ಆಗ ಶ್ರೀ ವೀರೇಂದ್ರ ಹೆಗ್ಗಡೆಯವರು ಬೆಂಗಳೂರಿನಲ್ಲಿ ಮೂರನೆಯ ಬಿ.ಎ. ತರಗತಿಯ ವಿದ್ಯಾರ್ಥಿಯಾಗಿದ್ದರು. ಉಳಿದ ಮಕ್ಕಳೂ ಅವರವರ ವಯಸ್ಸಿಗನುಣವಾಗಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದರು. ಆಗ ರತ್ನಮ್ಮನವರಿಗೆ ಆಗಸವೇ ಮೊಗಚಿ ಬಿದ್ದಂತಾಯಿತು. ನಿಂತ ನೆಲವೇ ಕುಸಿದಂತಾಯಿತು. ಕುಟುಂಬದ ಕಿರೀಟವೇ ಕಲಚಿಕೊಂಡತಾ ಯಿತು !

ಮಾತೃಶ್ರೀ ರತ್ನಮ್ಮನವರ ಬಾಳೆಲ್ಲ ಒಂದು ರೀತಿ ಅಗ್ನಿಪರೀಕ್ಷೆಯೇ ಆಗಿದೆ ದಾನ ಚಿಂತಾಮಣಿ ಅತ್ತಿಮಬ್ಬೆಗೆ ಎದುರಾದ ಅಸಾತಾವೇದನೀಯ ಕರ್ಮವು ರತ್ನಮ್ಮನವರನ್ನು ಅಡಿಯಿಂದ ಮುಡಿಯ ತನಕ ವ್ಯಾಪಿಸಿ ಗರ್ಜಿಸಿತು. ಇವರು ಕರ್ಮವು ರತ್ನಮ್ಮ ಪಂಚನಮಸ್ಕಾರ ಜಪಿಸುತ್ತ ನೋವನ್ನು ನುಂಗಿದರು. ಜಿನಪೂಜೆ ಮಾಡುತ್ತ ಪರಿಸ್ಥಿತಿ ಯನ್ನು ದಿಟ್ಟತನದಿಂದ ಎದುರಿಸಿದರು. ಎಲ್ಲವನ್ನೂ ಒಪ್ಪಮಾಡಲು, ಓರಣ ಮಾಡಲು ಸಂಕಲ್ಪತೊಟ್ಟರು. ಆಗ ಶ್ರೀ ವೀರೇಂದ್ರ ಹೆಗ್ಗಡೆಯವರು ಓದನ್ನು ಮಧ್ಯಕ್ಕೆ ನಿಲ್ಲಿಸಿ ಧರ್ಮಸ್ಥಳದ ಪೀಠವನ್ನೇರಿದರು. ತಾಯಿ ಮೆಚ್ಚುವಂತೆ ವ್ಯವಹಾರವನ್ನು ತೂಗಿಸಿದರು. ಹಿಂದಿನ ಎಲ್ಲ ಹೆಗ್ಗೆಡೆಯವರೂ ಸಾಧಿಸಿದ್ದಕ್ಕಿಂತ ನೂರುಪಟ್ಟು ಧರ್ಮಕಾರ್ಯ ಕ್ಷೇತ್ರವನ್ನು ತಮ್ಮ ತಾಯಿಯ ನೇತೃತ್ವದಲ್ಲಿ ವಿಸ್ತರಿಸಿದರು. ತಮ್ಮಂದಿರ ಹಾಗೂ ತಂಗಿಯ ವಿದ್ಯಾಭ್ಯಾಸಕ್ಕೆ ಅಡಚಣೆ ಬರದಂತೆ ನೊಡಿಕೊಂಡರು.

ಶ್ರೀ ಗೋಪಾಲ ಶೆಣೈರವರು ಗೊಮ್ಮಟಮೂರ್ತಿಯನ್ನು ಕಡೆದರು. ಅದನ್ನು ಕಾರ್ಕಳದಿಂದ ಧರ್ಮಸ್ಥಳಕ್ಕೆ ಸಾಗಿಸುವಾಗ ರತ್ನಮ್ಮನರು ವ್ರತನಿಯಮಗಳನ್ನು ಪಾಲಿಸುತ್ತಾ ಮೂರ್ತಿಯ ಜೊತೆಯಲ್ಲೇ ಕಾಲುನಡೆಗೆಯಲ್ಲಿ ಹೊರಟರು. ಸದಾ ಪಂಚನಮಸ್ಕಾರ ಜಪಿಸುತ್ತ ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಮೂರ್ತಿಯ ಸಾಗಟಕ್ಕೆ ವಿನಿಯೋಗಿಸಿದರು. ಸಾಗಾಟ ಸುಗುಮಗಾಲಿ ಎಂದು ಸರಾಗಸಮ್ಯಕ್ತ್ವದಿಂದ ವೀತರಾಗನನ್ನು ಪ್ರಾರ್ಥಿಸಿದರು. ಇವರ ತಪಸ್ಸಿನಿಂದ ಶ್ರೀ ವೀರೇಂದ್ರ ಹೆಗ್ಗಡೆಯವರ ಮಾತೃ ಭಕ್ತಿಯಿಂದ ಗೊಮ್ಮಟಮಹಾಮೂರ್ತಿ ಅಂತು ಇಂತು ಧರ್ಮಸ್ಥಳಕ್ಕೆ ಬಂದೇ ಬಿಟ್ಟಿತು !

೧೯೮೨ರಲ್ಲಿ ವೀರೇಂದ್ರ ಬಾಹುಬಲಿಯ ಪ್ರತಿಷ್ಠಾಪನೆಯಾದಾಗ ನಾನು ಪೂಜ್ಯ ಏಲಾಚಾರ್ಯ ವಿದ್ಯಾನಂದರ ಜೊತೆಯಲ್ಲೇ ಇದ್ದೆನು.ಪೂಜ್ಯ ವಿಮಲಸಗರರೂ, ಪೂಜ್ಯ ವಿದ್ಯಾನಂದರೂ ತೊಟ್ಟಿಲಲ್ಲಿ ಕುಳಿತು ಊರ್ಧ್ವಗಾಮಿಗಳಾಗಿ ಮೂರ್ತಿಯ ಅಂಗಂಗದಲ್ಲೂ ಬೀಜಾಕ್ಷರಗಳನ್ನು ಬರೆದುದನ್ನು ಕಣ್ಣಾರೆ ಕಂಡೆನು. ಆಗ ಮಾತೃಶ್ರೀ ರತ್ನಮ್ಮನವರೂ ಇವರ ಮಕ್ಕಳೂ ಆನಂದಾಶ್ರು ಸುರಿಸಿದುದನ್ನು ನಾನು ಕಂಡೆನು. ತಮ್ಮ ಕುಟುಂಬದ ಪರಮಧ್ಯೇಯ ಕೈಗೂಡಿತೆಂದು ಇವರು ಪರಮಾನಂದ ಗೊಂಡರು. ಚಾಮುಂಡರಾಯ ಶ್ರವಣಬೆಳಗೊಳದಲ್ಲಿ ಎಷ್ಟು ವೈಭವದಿಂದ ಧರ್ಮಸ್ಥಳದ ಬಾಹು ಬಲಿಯ ಪ್ರತಿಷ್ಠೆಯೂ ಆಯಿತು. ನೂರಾರು ಮಂದಿ ಮುನಿಗಳೂ ಆರ್ಯಿಕೆಯರೂ ಲಕ್ಷಾಂತರ ಮಂದಿ ಶ್ರಾವಕರೂ ಈ ಮಹಾಮಸ್ತಕಭಿಷೇಕವನ್ನು ಕಂಡು ಮಾತೃಶ್ರೀ ರತ್ನಮ್ಮನವರ ಕುಟುಂಬ ಚಿರಸ್ಥಾಯಿಯಾಗಲಿ ಎಂದು ಹರಸಿದರು.

ಪೂಜ್ಯ ವಿದ್ಯಾನಂದರು ಧರ್ಮಸ್ಥಳವನ್ನು ಬಿಡುವ ಮುನ್ನ ಪ್ರವಚನ ಮಾಡುತ್ತಾ ವೀರೇಂದ್ರ, ಸೆರೇಂದ್ರ, ಹರ್ಷೇಂದ್ರ ಮತ್ತು ರಾಜೇಂದ್ರರು ಕಾಮಧೇನುವಿನ ಕೊಡಗೆಚ್ಚಲಿನಂತೆ ಅಮೃತಮಯವಾಗಿರುವರು .ಇವರು ವ್ಯಸನಗಳಿಗೆ ಬಲಿ ಬೀಳದೆ ಭವ್ಯಾತ್ಮರಾಗಿರುವರು. ಇವರು ಶ್ರೀಮಂತರು ನವಯುವಕರು ಮತ್ತು ರೂಪವಂತರು. ಈ ಮೂರೂ ಇದ್ದು ಇವರ ಬಳಿ ಪಾಪಗಳು ಸುಳಿಯದಂತೆ ಸರಗಸಮ್ಯಕ್ತ್ವ ಶಿರೋಮಣಿಯೂ, ಆಸನ್ನಭವ್ಯೆಯೂ, ಸದ್ಧರ್ಮದೀಪಿಕೆಯೂ ಆದ ರತ್ನಮ್ಮ ಹೆಗ್ಗಡತಿಯವರು ತಮ್ಮ ಮಕ್ಕಳಿಗೆ ಅಡಿಯಿಂದ ಮುಡಿತನಕ ಪಾಪನಿರೋಧಕ ವಜ್ರಲೇಪನ ಮಾಡಿರುವರು. ಈ ಪಿತ್ರರು ನಾಲ್ವರು ,ಇವರ ಪುತ್ರಿ ಕು ॥ ಪದ್ಮಲತಾ ಈ ಐವರೂ ಪಂಚಾಶ್ಚರ್ಯಗಳಾಗಿ ತೊಳಗುತ್ತಿರುವರು. ಇದು ರತ್ನಮ್ಮನವರ ತಪಸ್ಸಿನ ಫಲವಾಗಿದೆ” ಎಂದು ಮಹಾಮುನಿಗಳು ಹರ್ಷೋದ್ಗಾರ ಮಾಡಿದರು. ರತ್ನಮ್ಮನವರನ್ನು ಕುಟುಂಬ ಶಿಲ್ಪಿಯೆನ್ನಲು ಇದಕ್ಕಿಂತ ಬೇರೆ ಸರ್ಟಿಫಿಕೇಟ್ ಬೇಕೆ ?

ದಾನ ಚಿಂತಾಮಣಿ ಅತ್ತಿಮಬ್ಬೆಯನ್ನು ರತ್ನಮ್ಮನವರು ಆದರ್ಶವಾಗಿಟ್ಟು ಕೊಂಡರು. ಅತ್ತಿಮಬ್ಬೆ ಸಾವಿರಾರು ಬಂಗಾರದ ಜಿನಬಿಂಬಗಳನ್ನು ಮಾಡಿಸಿ ನಾಡಿ ಗರ್ಜಿಸಿದಳು. ರತ್ನಮ್ಮನವರು ಸಾವಿರಾರು ಮಂದಿ ಕಂದಮ್ಮಗಳನ್ನು ತನ್ನ ಮಕ್ಕಳೇ ಎಂದು ಭಾವಿಸಿ ಅವರೆಲ್ಲರಿಗೂ ಜಿನಭಕ್ತಿಯನ್ನು

ತುಂಬಿ ಸತ್‌ಸಂಪ್ರದಾಯದ ಶುಕ್ಲ ಲೇಶ್ಯೆಯ ಪುತ್ಥಳಿಗಳನ್ನಾಗಿ ಮಾಡಿ, ಸಜೀವಿ ರತ್ನಬಿಂಬಗಳಾಗುವಂತೆ ಕಡೆದು ಕರ್ಣಾಟಕ್ಕೆ ಅರ್ಪಿಸಿರುವರು. ಅತ್ತಿಮಬ್ಬೆ ೧೫೦೦ ಜಿನಮಂದಿರಗಳನ್ನು ನಿರ್ಮಾಣ ಮಾಡಿ ಮಹಿಮಾನ್ವಿತಳಾದಳು. ಇತ್ತ ರತ್ನಮ್ಮನವರು ಅಭಿನವ ಚಾಮುಂಡರಾಯರೆನಿಸಿದ ಶ್ರೀ ವಿರೇಂದ್ರ ಹೆಗ್ಗಡೆಯವರಿಗೆ ಹೇಳಿ ಕರ್ಣಾಟಕ ಉದ್ದಗಲದಲ್ಲೂ ಹಾಳು ಬೀಳುವ ಸ್ಥಿತಿಯಲ್ಲಿದ್ದ ದೇವಾಲಯಗಳನ್ನು ಅವು ಯಾವ ಧರ್ಮಕ್ಕೇ ಸೇರಿರಲಿ ಅದನ್ನು ಗಮನಿಸದೆ ಜೀರ್ಣೋದ್ಧಾರ ಮಾಡಿಸುತ್ತಿರುವರು.

ಅತ್ತಿಮಬ್ಬೆ ತನ್ನ ಕಣ್ಣಿಗೆ ಬಿದ್ದ ಜೈನಗ್ರಂಥಗಳನ್ನು ಸಾವಿರ ಸಾವಿರವಾಗಿ ಪ್ರತಿ ಮಾಡಿಸಿದಂತೆ ಮಾತೃಶ್ರೀ ರತ್ನಮ್ಮನವರೂ ಹಲವಾರು ಜೈನಗ್ರಂಥಗಳನ್ನು ಸಾವಿರ ಸಾವಿರವಾಗಿ ಪ್ರಕಟಿಸಿ ಹಂಚುತ್ತಿರುವರು. ಎಲ್ಲೆಲ್ಲೋ ಅಚ್ಚಾಗುವ ಗ್ರಂಥಗಳಿಗೆ ಸಹಾಯ ಧನವನ್ನು ಕೊಟ್ಟು ಇವರು ಪ್ರತ್ಯಕ್ಷವಾಗಿ ಶಾರದಾಪೂಜೆ ಮಾಡುತ್ತಿರುವರು. ಶ್ರವಣಬೆಳಗೊಳದಲ್ಲಿ ೧೯೮೦ರಲ್ಲಿ ಪೂಜ್ಯ ಮುನಿಶ್ರೀ ವಿದ್ಯಾನಂದರು ಚಾತುರ್ಮಾಸದಲ್ಲಿ ಪ್ರವಚನ ಮಾಡಿದ್ದನ್ನು ಸ್ಥಾಯಿಗೊಳಿಸಲು ಇವರು ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಹೇಳಿ ನನಗೆ ಒಂದು ಟೇಪ್‌ರಿಕಾರ್ಡರ್ ಕೊಡಿಸಿ ಶ್ರವಣಬೆಳಗೊಳದಲ್ಲೇ ನಾನು ತಂಗಿ ಅಂದಂದಿನ ಪ್ರವಚನವನ್ನು ಟೇಪಿನಲ್ಲಿ ಸೆರೆಹಿಡಿದು ಅಂದಂದೇ ಬರೆದಿಡುವಂತೆ ಏರ್ಪಾಟು ಮಾಡಿದರು. ಜಿನವಾಣಿಯ ಪೂರ್ವಾಸ್ಥೆಯಾದ ಮುನಿವಾಣಿಯನ್ನು ನಾನು ಸೆರೆಹಿಡಿದು ಬರೆದಿಟ್ಟೆನು. ಇದನ್ನೇ ವಿದ್ಯಾನಂದವಾಣಿ ಎಂಬ ಹೆಬ್ಬೊತ್ತಿಗೆಯಾಗಿ ಪ್ರಕಟಿಸಿ ರತ್ನಮ್ಮನವರು ಧರ್ಮ ಪ್ರಭಾವನೆ ಮಾಡಿದರು. ಈ ಕಾರ್ಯ ಮಾಡಲು ನನಗೆ ಸಂಭಾವನೆಯನ್ನು ಕೊಟ್ಟರು. ಸಕ್ಕರೆ ಮುಕ್ಕಲು. ನನಗೆ ಸಂಬಳವೂ ಸಿಕ್ಕಿದಂತಾಯಿತು ! ಉತ್ತರಭಾರತದಲ್ಲೂ ಅಂದಿಗೆ ಇಂಥ ಪರಿಪೂರ್ಣ ಪ್ರವಚನ ಸಂಪುಟ ಅಚ್ಚಾಗಿರಲಿಲ್ಲ. ಹತ್ತನೆಯ ಶತಮಾನದ ದಾನ ಚಿಂತಾಮಣಿ ತನ್ನ ಕನಸುಗಳನ್ನೆಲ್ಲ ನನಸುಮಾಡಿಕೊಳ್ಳಲು ಮತ್ತೆ ೨೦ನೆಯ ಶತಮಾನದಲ್ಲಿ ಧರ್ಮಸ್ಥಳವನ್ನು ಆರಿಸಿ ರತ್ನಮ್ಮನವರಾಗಿ ಕಾಣಿಸಿಕೊಂಡಿರುವಳೋ ಏನೊ !

ನಾನು ಸಾಹಿತಿಯಾಗಿ ಬೆಳಕಿಗೆ ಬಂದುದೂ ಮಾತೃಶ್ರೀ ರತ್ನಮ್ಮನವರು ಔದಾರ್ಯದಿಂದಲೇ. ನಾನು ಬರೆದುದಕ್ಕೂ ಲೆಕ್ಕವಿಲ್ಲ ಅವರು ಹಣಕೊಟ್ಟುದಕ್ಕೂ ಲೆಕ್ಕವಿಲ್ಲ, ನನ್ನಂತೆ ಇನ್ನೂ ಎಷ್ಟೋ ಜನ

ಸಾಹಿತಿಗಳು ಇವರ ಪರಮೌದಾರ್ಯದ ನೆರಳಲ್ಲಿ ತಂಗಿ ಹಾಯಾಗಿರುವರು. ಸಾಹಿತಿಗಳು ನಾವೆಲ್ಲ ಮಾತೃಶ್ರೀ ರತ್ನಮ್ಮನವರು ಮಾನಸಪುತ್ರರೇ ಆಗಿರುವೆವು. ನಾವೂ ಇವರ ಕುಟುಂಬ ವರ್ಗದವರೇ ಆಗಿರುವೆವು.

ಮಾತೃಶ್ರೀ ರತ್ನಮ್ಮನವರ ಕುಟುಂಬವೆಂದರೆ ವಿಶ್ವಕುಟುಂಬವೇ ಆಗಿದೆ. ನಾವೆಲ್ಲ ಅವರ ಕುಟಂಬದ ಗೌರವಾನ್ವಿತ ಸದಸ್ಯರೇ ಆಗಿರುವೆವು. ಇವರು ಸಾಧಾರಣ ಮಾತೆಯಲ್ಲ ಅಭಿನವ ಜಗನ್ಮಾತೆಯಾಗಿರುವರು. ರತ್ನಮ್ಮನವರು ಬೃಹದ್ ಅಯಸ್ಕಾಂತವಾಗಿರುವರು. ನನ್ನಂಥ ಕಬ್ಬಿಣದ ಚೂರುಗಳು ಯಾವ ಜನ್ಮದ ಪುಣ್ಯದಿಂದಲೋ ಇವರ ದೃಷ್ಟಿಗೆ ಬಿದ್ದು ಮರಿ ಅಯಸ್ಕಾಂತಗಳಾಗಿರುವರು. ಇವರು ವಿಶ್ವಕುಂಬದರೂವಾರಿಯಾಗಿರುವರು. ಕಾರಣಕನ್ನೆಯಾಗಿರುವರು. ಜೀವಂತಮೂರ್ತಿಗಳನ್ನು ಕಡೆದು ಪ್ರಾಣ ಪ್ರತಿಷ್ಠೆ ಮಾಡುವ ವಿಶ್ವಶಿಲ್ಪಿಯಾಗಿರುವರು.

ಒಮ್ಮೆ ಇವರ ಮೂರನೆ ಸೊಸೆ ಶ್ರೀ ಹರ್ಷೇಂದ್ರ ಕುಮಾರರ ಪತ್ನಿ ಶ್ರೀಮತಿ ಸುಪ್ರಿಯರವರು ಮೈಸೂರಿಗೆ ತೌರುಮನೆಗೆ ಬಂದಿದ್ದರು. ನನ್ನನ್ನು ಅಲ್ಲಿಗೆ ಕರೆಸಿ ಕೊಂಡು ಅಧ್ಯಾತ್ಮಿಕ ಮತ್ತು ಜ್ಯೋತಿಷ್ಯದ ಬಗ್ಗೆ ಗಹನವಾಗಿ ಚರ್ಚೆಮಾಡಿದರು. ಇವರ ಅಗಾಧವಾದ ಪಾಂಡಿತ್ಯವನ್ನು ಕಂಡು ನಾನು ಬೆರಗಾದೆನು. ಗಂಭೀರ ಪ್ರಕೃತಿಯ, ಮಿತಭಾಷಿಯ ಇವರು ಗಹನವಿಷಯಗಳನ್ನು ಗ್ರಹಿಸಿರುವರು. ಸೂರ್ಯಾಸ್ತಕ್ಕೆ ಮೊದಲು ನನಗೆ ಅವರೇ ಊಟಕ್ಕೆ ಬಡಿಸಿದರು. "ನಿಮಗೆ ವಯಸ್ಸಾಗಿದೆ ಬಸ್ಸಿನಲ್ಲಿ ಹೋಗಬೇಡಿ, ಆಟೋ ಮಾಡಿಕೊಂಡು ಹೋಗಿ" ಎಂದು ಎಚ್ಚರಿಕೆಯನ್ನೂ ಕೊಟ್ಟರು. ಇವರ ದೊಡ್ಡಮಗ "ಅಂಕಲ್ ಆಟೋ ಸ್ಟ್ಯಾಂಡ್ ಇಲ್ಲಿಂದ ಸ್ವಲ್ಪ ದೂರವಾಗುವುದು. ನಾನು ತಮ್ಮನ್ನು ಕಾರಿನಲ್ಲಿ ಬಿಟ್ಟು ಬರುವೆನು" ಎಂದು ಸಿದ್ಧವಾದರು. ಮಾತೃಶ್ರೀ ರತ್ನಮ್ಮನವರ ಸಂಪರ್ಕಪಡೆದ ಅವರ ಸೊಸೆಯರೂ, ಮೊಮ್ಮಕ್ಕಳೂ ಮಾತಾಡುವ ಚಿಂತಾಮಣಿಗಳಾಗಿರುವರಲ್ಲ ಎಂದು ನಾನು ಸೋಜಿಗಪಟ್ಟೆನು.

೧೯೮೮ರ ದಶಲಕ್ಷ ಪರ್ವಕ್ಕೆ ಪ್ರವಚನ ಮಾಡಲು ನನ್ನನ್ನೂ ಅ. ನಾ. ಚಂದ್ರ ಕೀರ್ತಿಯವರನ್ನೂ ಬೆಂಗಳೂರಿನ ವಿಮಾನಪುರದ ಜಿನಮಂದಿರ ಸಮಿತಿ ಆಹ್ವಾನಿ ಸಿದ್ದಿತು. ನಾವು ಬೆಂಗಳೂರಲ್ಲಿ ಇಸ್ರೋ ಗೃಹಸಮುಚ್ಚಯದಲ್ಲಿರುವ ಶ್ರೀ ಜಿ. ಅಜಿತಕುಮಾರವರ ಮನೆಯಲ್ಲ ಇಳಿದುಕೊಂಡೆವು. ನಾನು

ಸಂಯಮದ ಬಗ್ಗೆ ಪ್ರವಚನ ಮಾಡುವಾಗ ಅಲ್ಲಿಗೆ ಮಾತೃಶ್ರೀ ರತ್ನಮ್ಮನವರೂ ಇವರ ಮಗಳು ಶ್ರೀಮತಿ ಪದ್ಮಲತಾರವರೂ, ಇವರ ಪತಿ ಡಾ ॥ ನಿರಂಜನ ಕುಮಾರರೂ ಆಗಮಿಸಿ ನನ್ನ ಸ್ಫೂರ್ತಿಗೆ ಪುಲಕವಿಟ್ಟರು.

ಮಾರನೆಯ ದಿನ ನಾನೂ ಮತ್ತು ಶ್ರೀ ಅ. ನಾ. ಚಂದ್ರಕೀರ್ತಿಯವರು ಶ್ರೀ ಅಜಿತಕುಮಾರರ ಮನೆಯಲ್ಲಿ ಬೆಳಗಿನ ಉಪಹಾರ ತೀರಿಸಿಕೊಂಡು ಚಿಕ್ಕಪೇಟೆಗೆ ಹೋಗಲು ಆಟೋ ಹತ್ತುತ್ತಿದ್ದಂತೆ ಅಜಿತಕುಮಾರರ ಪತ್ನಿ ಶ್ರೀಮತಿ ಮಂಜುಳರವರು. ಓಡೋಡಿ ಬಂದು " ಈಗ ತಾನೇ ಶ್ರೀ ವೀರೇಂದ್ರ ಹೆಗ್ಗಡೆಯವರ ತಂಗಿ ಶ್ರೀಮತಿ ಪದ್ಮಲತಾರವರು ಫೋನು ಮಾಡಿ ನಿಮ್ಮನ್ನು ಅವರ ಮನೆಗೆ ಕಳುಹಿಸುವಂತೆ ತಿಳಿಸಿದರು" ಎಂದು ಹೇಳಿ ಹೋಗುವ ದಾರಿಯನ್ನು ವಿವರಿಸಿದರು.

ನಾವು ಆಟೋವನ್ನು ನೇರವಾಗಿ ಡಾ ॥ ನಿರಂಜನ ಕುಮಾರರ ಮನೆಗೆ ಹೋಗುವಂತೆ ತಿಳಿಸಿದೆವು. ನಮಗಾಗಿ ಶ್ರೀಮತಿ ಪದ್ಮಲತಾರವರು ನಿರೀಕ್ಷಣೆ ಮಾಡಿಕೊಂಡು ಕಾಯುತ್ತಿದ್ದರು. ನಮ್ಮನ್ನುಕಂಡ ಕೂಡಲೆ ಸಂಭ್ರಮದಿಂದ ಸಡಗರದಿಂದ ಕಾಯುತ್ತಿದ್ದರು. ನಮ್ಮನ್ನು ಕಂಡ ಕೂಡಲೆ ಸಂಭ್ರಮದಿಂದ ಸಡಗರದಿಂದ ಸ್ವಾಗತಿಸಿ "ಇಂದು ನಮಗೆ ಸತ್ಸಂಗ ದೊರೆತಂತಾಯಿತು !" ಎಂದು ಹಿಗ್ಗಿದರು. ಆಧ್ಯಾತ್ಮ –ಸಾಹಿತ್ಯ–ಸಂಗೀತ ಈ ಮೂರರ ಬಗ್ಗೆ ಇವರು ಚರ್ಚಿಸಿದರು. ನನ್ನ ರತ್ನಾಕರಶತಕ ಸಾಹಿತ್ಯವನ್ನು ರಚನಾತ್ಮಕವಾಗಿ ವಿಮರ್ಶೆಮಾಡಿದರು. ಆಮೇಲೆ ಇವರ ಕರೆಯಂತೆ ಡಾ ॥ ನಿರಂಜನ ಕುಮಾರರೂ ಅಲ್ಲಿಗೆ ಬಂದರು. ನಾವು ಬಂದುದಕ್ಕೆ ಸಂತೋಶ ವ್ಯಕ್ತಪಡಿಸಿದರು. ಸುಗ್ರಾಸ ಉಪಾಹಾರವಾಯಿತು. ನಾವು ಹೊರಟಾದ ಶ್ರೀಮತಿ ಪದ್ಮಲತಾರವರು ನನ್ನ ಕೈಗೆ ಒಂದು ಕವರ್ ಕೊಟ್ಟರು. ಡಾಕ್ಟರವರು. ಶ್ರೀ ಅ. ನಾ. ಚಂದ್ರಕೀರ್ತಿಗೆ ಒಂದು ಫಾರಿನ ಪೆನ್ನುಕೊಟ್ಟರು. ನಾವು ರಿಕ್ಷ ಹತ್ತಿ ದಾರಿಯಲ್ಲಿ ಕವರನ್ನು ತೆಗೆದು ನೋಡಿದರೆ ಅದಲ್ಲಿ ೫೦೦ ರೂ ಇದ್ದಿತು. ಮಾತೃ ಶ್ರೀ ರತ್ನಮ್ಮನವರ ಮಕ್ಕಳೂ, ಸೊಸೆಯರೂ ಮೊಮ್ಮಕ್ಕಳೂ ಅಳಿಯ ಇವರೆಲ್ಲರೂ ವಿಶ್ವಮಾತೆಯ ಸಮ್ಮೋಹನಕ್ಕೆ ಒಳಗಾಗಿರುವರು. ಇವರ ಕುಟುಂಬವರ್ಗದ ಪ್ರತಿಯೊಬ್ಬರೂ ನಡೆದಾಡುವ ಕಲ್ಪವೃಕ್ಷವಾಗಿರುವರು. ಇವರ ಕುಟುಂಬದಲ್ಲಿ ನಾನು ಯಾರ ಬಳಿಹೋದರೂ ಅಯಾಚಿತವಾಗಿ ನನಗೆ ಬೇಕಾದುದೆಲ್ಲ ದೊರೆಯದಿರದು. ಇಂಥ ಭವ್ಯ ಪರಿಸರದ ರೂವಾರಿ ಮಾತೃಶ್ರೀ ರತ್ನಮ್ಮನವರು.

ವಿಶ್ವಕುಟುಂಬದ ಶಿಲ್ಪಿಯಾಗಿರುವರು. ವಿಶ್ವಾನುಕಂಪದ. ವಿಶ್ವಮೈತ್ರಿಯ, ಸರಾಗ ಸಮ್ಯಕ್ತ್ವದ ತ್ರಿವೇಣೀಸಂಗಮವಾಗಿ ಮಾತೃಶ್ರೀ ರತ್ನಮ್ಮನವರು ರಾರಾಜಿಸುತ್ತಿರುವರು !

ಶ್ರೀ ಎಂ. ಸಿ. ಅನಂತರಾಜಯ್ಯ –ಬೆಂಗೂಳೂರು

ಮಧುಗಿರಿಯಲ್ಲಿ ಶ್ರಾವಕ ಶಿರೋಮಣಿ ಶ್ರೀ ಚಂದಪ್ಪನವರು ತಮ್ಮ ಪತ್ನಿ ಶ್ರೀಮತಿ ಚಂದ್ರಮತಮ್ಮನವರೊಡನೆ ನವರೊಡೆನೆ ನೆಮ್ಮದಿಯಾಗಿದ್ದರು. ಈ ದಂಪತಿಗಳಿಗೆ ೧೯೨೩ರಲ್ಲಿ ಪುತ್ರರತ್ನವಾಯಿತು. ಮಗುವಿಗೆ ಅನಂತರಾಜಯ್ಯ ಎಂದು ಹೆಸರಿಟ್ಟರು. ಬಾಲ್ಯದಲ್ಲೇ ತಬ್ಬಲಿಯಾದ ಇವರು ಪಾಗವಡದ ತಮ್ಮ ಅಕ್ಕನ ಮನೆ ಸೇರಿಕೊಂಡರು. ಕಷ್ಟ ಕಾರ್ಪಣ್ಯದಿಂದಲೇ ಮಧುಗಿರಿಯಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಪ್ರಾರಂಭಿಸಿದರು. ಆಗಾಗ ಎರಡು ಮೂರು ರೂಪಾಯಿ ಬೇಡಿತರಲು ಇವರು ಮಧುಗಿರಿಗೆ ೧೫ ಮೈಲಿ ದೂರವಿದ್ದ ಗೌರಿಬಿದನೂರು ತಾಲ್ಲೋಕು ಕುರುಡಿಗೆ ಕಾಲನಡೆಗೆಯಲ್ಲಿ ನನ್ನೊಡೆನೆ ಬರುತ್ತಿದ್ದರು. ನಾನು ಅರಸಾಪುರದಲ್ಲಿ ನಮ್ಮ ಮನೆಗೆ ಹೋದರೆ ಇವರು ಇನ್ನೂ ಮೂರು ಮೈಲಿ ನಡೆದು ಕುರುಡಿಗೆ ಹೋಗಿ ಅಲ್ಲಿದ್ದ ದೊಡ್ಡಮ್ಮನನ್ನು ಕಂಡು ಅವರು ಕೊಟ್ಟಷ್ಟು ತೆಗೆದುಕೊಂಡು ಮಧುಗಿರಿಗೆ ಬರುತ್ತಿದ್ದರು. ೧/೩ ಪೈಸೆಗೆ ಒಂದು ಇಡಲಿ ಆ ಕಾಲದಲ್ಲಿ ಸಿಗುತ್ತಿದ್ದಿತು. ಎಷ್ಟೋ ದಿನ ಎರಡು ಮೂರು ಇಡಲಿ ತಿಂದು ಇವರು ಕಾಲಯಾಪನೆ ಮಾಡಿದ್ದೂ ಉಂಟು. ಹಾಗೂ ಹೀಗೂ ಮೆಟ್ರಿಕ್ ಪಾಸಾದರು (೧೯೪೧)

ವಿಮಾನ ಕಾರ್ಖಾನಯಲ್ಲಿ ಇವರು ಕೆಲಸಕ್ಕೆ ಸೇರಿ ಎರಡು ಮೂರು ವರ್ಷ ಅಲ್ಲಿ ಸ್ಟೋರ್ ಕೀಪರ್ ಆಗಿದ್ದರು. ಇವರ ಬುದ್ಧಿವಂತಿಕೆಯನ್ನು ಕಂಡು ಎಂ. ಬಿ. ಟಿ. ಲಾರಿಯ ಮಾಲೀಕರ ಪ್ರೀತಿಗೆ ಪಾತ್ರರಾಗಿ ಕಂಪನಿಯಲ್ಲಿ ಪಾಲುದಾರರಾದರು. ಆಗ ಹಣದ ಮಹಾಪೂರ ಹರಿದು ಬಂದಿತು. ಹಣ ಕೈಸೇರುತ್ತಿದ್ದಂತೆ ಇವರ ಔದಾರ್ಯ ಹಾಗೂ ಸಮಾಜ ಹಿತ ಎರಡೂ ಕುಡಿಯಿಟ್ಟವು. ಹಾಸನದಲ್ಲಿ ಜೈನ ವಿದ್ಯಾರ್ಥಿನಿಲಯ ಕಟ್ಟಲು ೧೯೬೦ರಲ್ಲಿ ೧೦,೦೦೦ ರೂ. ದಾನ ಮಾಡಿದರು. ೧೯೬೨ರಲ್ಲಿ ಶಿವಮೊಗ್ಗ ದಲ್ಲಿ ಒಂದು ಜೈನ ವಿದ್ಯಾರ್ಥಿನಿಲಯವನ್ನು ತಾವೇ ಕಟ್ಟಿಸಿಕೊಟ್ಟರು. ನೂರಾರು ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ತಿವೇತನ ಕೊಡುತ್ತಾ ಬಂದರು.

ನನ್ನ ಪುಸ್ತಕಗಳ ಪ್ರಕಣೆಗಾಗಿ ರತ್ನಾಕರ ಮಂಡಲಿ ಸ್ಥಾಪಿಸಿ ಮೂಲಧನವಾಗಿ ೧೯೬೧ರಲ್ಲಿ ೫೦೦೦ ರೂ ಕೊಟ್ಟರು. ನಾನು ಬರೆದ ರತ್ನಾಕರ ಕಾದಂಬರಿ . ರತ್ನಾಕರನ ಶತಕ ಸಾಹಿತ್ಯ ಮತ್ತು ನಿರಂಜನಸುತ್ತಿ ಇವು ಆ ಹಣದಲ್ಲಿ ಅಚ್ಚಾದವು. ಮೊದಲಿನೆರಡು ಪುಸ್ತಕಗಳಿಗೂ ಸರ್ಕಾರದಿಂದ ಬಹುಮಾನ ಬಂದಿತು. ನನ್ನನ್ನು ಬೆಳಕಿಗೆ ತಂದ ಮಹಾಪುರಷರೇ ಎಂ. ಸಿ. ಅನಂತರಾಜ್ಯನವರು. ನನಗೆ ಆರ್ಥಿಕ ಮುಗ್ಗುಟ್ಟು ಬಂದಾಗಲ್ಲೆಲ್ಲ ತಾವಾಗೇ ಕಾಣಿಸಿಕೊಂಡು ಸಹಾಯ ಮಾಡಿರುವರು. ನನಗೆ ಅಪದ್‌ಬಾಂಧವರೆಂದರೆ ಶ್ರೀ ಎಂ . ಸಿ. ಅನಂತರಾಜಯ್ಯನವೆರೇ. ನಾನು ಪಡೆದ ಎಲ್ಲಾ ಕೀರ್ತಿಯನ್ನೂ ಇವರಿಗೆ ಅರ್ಪಿಸಿ ಅಷ್ಟೋ ಇಷ್ಟೋ ಋಣಮುಕ್ತನಾಗುವೆನು.

೧೭-೫-೧೯೪೮ರಲ್ಲಿ ಇವರಿಗೆ ಹಾಸನದ ಶ್ರೀಮುರಾರಪ್ಪನವರ ತಂಗಿ ಶ್ರೀಮತಿ ಕೌಸಲ್ಯಮ್ಮನವರೊಡನೆ ಮುದುವೆಯಾಯಿತು. ಇವರು ನಡೆದಡುವ ಕಲ್ಪವೃಕ್ಷವಿದ್ದಂತೆ ೧೯೬೩ರಲ್ಲಿ ಇವರು ಬೊಂಬಾಯಲ್ಲಿರುವಾಗ ಕನ್ಯಾ ಕೌಸ್ತುಭ ರತ್ನವಾದ ಚಿ. ಸೌ. ಶೋಭ ಜನಿಸಿದರು. ಈಕೆಯ ನಾಮಕರಣಕ್ಕೆ ನಾನು ಮತ್ತು ಶ್ರೀ ಎಚ್. ಎಸ್. ನೇಮಿನಾಥಯ್ಯನವರು. ಬೊಂಬಾಯಿಗೆ ಹೋಗಿ ಒಂದು ವಾರ ಇವರ ಮನೆಯ ಸವಿಯುಂಡೆವು.

ಭರತೇಶ ವೈಭವದ ಪ್ರಕಟಣೆಗೆ ಶ್ರೀ ಎಂ. ಸಿ. ಅನಂತರಾಜಯ್ಯವರು ೧೯೬೭ರಲ್ಲಿ ನನಗೆ ೫೦೦೦ ರೂ ಸಾಲವಾಗಿ ಕೊಟ್ಟು ಕೊನೆಗೆ ಸಾಲವನ್ನು ಮನ್ನ ಮಾಡಿದರು. ನನ್ನ ಇವರ ಸಂಬಂಧ ಜನ್ಮಾಂತರ ಸಂಬಂಧ. ಹತ್ತಾರು ಜಿನಾಲಯಗಳ ಜೀರ್ಣೋದ್ಧಾರಕ್ಕೆ ತೊರೆ ಬಿಟ್ಟ ಕಾಮಧೇನುವಿನಂತೆ ಇವರು ದಾನ ಮಾಡಿರುವರು. ಹೊಸ ದುರ್ಗದ ಜಿನಾಲಯದ ಪಂಚಕಲ್ಯಾಣದ ಪೂರ್ಣ ಜವಾಬ್ದಾರಿಯನ್ನು ಇವರು ವಹಿಸಿ ಕೊಂಡು ೧೯೬೮ರಲ್ಲಿ ಸರ್ವಾಂಗಸುಂದರವಾಗಿ ನಡೆಸಿಕೊಟ್ಟರು. ದಾನಚಿಂತಾ ಮಣಿಯ ೧೦೦೦ ಪ್ರತಿ ಶಾಸ್ತ್ರದಾನ ಮಾಡಿದರು.

ಪುಟ್ಟೇನಹಳ್ಳಿ ಜಿನಾಲಯದ ಹಾಗೂ ಬಿದರೆಯ ಜಿನಾಲಯದ ನಿರ್ಮಾಣಕ್ಕಾಗಿ ಇವರು ಹೇರಳಾವಾಗಿ ಧನ ಸಹಾಯ ಮಾಡಿರುವರು. ಕಿದ್ವಾಯಿ ಆಸ್ಪತ್ರೆಗೆ ಒಂದು ಲಕ್ಷ ರೂ ಕೊಟ್ಟಿರುವರು. ಆಹಾರದಾನ. ಅಭಯದಾನ ಔಷಧಿದಾನ, ಶಾಸ್ತ್ರದಾನ ಇವನ್ನು ಪ್ರತಿನಿತ್ಯವೂ ಮಾಡುತ್ತಿರುವರು.

೧೯೬೮ರಲ್ಲಿ ಧರ್ಮಸ್ಥಳದ ರತ್ನವರ್ಮ ಹೆಗ್ಗಡೆಯವರು. ಕಾಯಿಲೆ ಬಿದ್ದಾಗ ಶ್ರೀ ಎಂ. ಸಿ. ಯವರನ್ನು ಕರೆಸಿಕೊಂಡು ನಿಜವಾದ ದಾನ ಚಿಂತಾಮಣಿ ಯೆಂದರೆ ನೀವೇ ಸರಿ. ಬೆವರು. ಸುರಿಸಿ ಗಳಿಸಿದ ಹಣವನ್ನು ಜನಹಿತಕ್ಕಾಗಿ ಸದ್ವಿನಿಯೋಗ ಮಾಡಿದಿರಿ ಎಂದು ಮುಕ್ತಕಂಠರಾಗಿ ಕೊಂಡಾಡಿದರು.

ಅನಂತರಾಜಯ್ಯನವರು ಕೌಸಲ್ಯಮ್ಮನವರೂ ನೂರಾರು ಮಂದಿ ಮುನಿಗಳಿಗೂ ಆಹಾರದಾನ ಮಾಡಿ ಪುನೀತರಾಗಿರುವರು. ಹತ್ತಾರು ಜಿನಬಿಂಬಗಳನ್ನು ಮಾಡಿಸಿ ಜಿನಾಲಯಗಳಿಗೆ ಪ್ರತಿಷ್ಠೆ ಮಡಲು ಕೊಟ್ಟಿರುವರು.

೧೯೬೭ರಲ್ಲಿ ಬೆಂಗಳೂರಿನ ಪುಟ್ಟೇನಹಳ್ಳಿ ಜಿನಾಲಯದ ಪಂಚಕಲ್ಯಾಣದಲ್ಲಿ ನನಗೆ ಮಹಾಸಭೆಯಲ್ಲಿ ಸ್ವಸ್ತಿಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ೫೦೦೦ ರೂ ಕೊಟ್ಟು ಸನ್ಮಾನ ಮಾಡಿದರು.

ಈಗ ಎಲ್ಲಾ ಲೌಕಿಕ ವ್ಯವಹಾರವನ್ನೂ ತೊರೆದು ಇವರು ಧ್ಯಾನ, ಅಧ್ಯಯನವನ್ನು ಮಾತ್ರ ಉಳಿಸಿಕೊಂಡು ಸಾಮಾಯಿಕ ಪ್ರತಿಮೆಯನ್ನು ಆಚರಿಸುತ್ತಿರುವರು. ಪ್ರತಿ ವರ್ಷ ನೂರಾರು ಮಂದಿಯನ್ನು ಜೈನ ತೀರ್ಥಕ್ಷೇತ್ರಗಳಿಗೆ ಯಾತ್ರೆಗೆ ಕರೆದುಕೊಂಡು ಹೋಗಿ ತಾವೂ ಪುಣ್ಯಭಾಗಿಗಳಾಗುತ್ತಿರುವರು. ಯಾತ್ರಿಕರಿಗೂ ಪುಣ್ಯ ಬಾಚಲು ಅವಕಾಶ ಕಲ್ಪಿಸುತ್ತಿರುವರು.

೧೯೮೩ರಲ್ಲಿ ತಮ್ಮ ಏಕ ಮಾತ್ರ ಪುತ್ರಿ ಚಿ. ಸೌ. ಶೋಭಳನ್ನು ನವದೆಹಲಿಯ ಶ್ರೀನರೇಂದ್ರ ಕುಮಾರ್ ಮತ್ತು ಶ್ರೀಮತಿ ಶಕುಂತಲರವರ ಪುತ್ರ ಚಿ. ರಾ. ವಿಮುಕ್ತರಿಗೆ ಕೊಟ್ಟು ವಿವಾಹಮಾಡಿದರು. ಈ ನವದಂಪತಿಗಳಿಗೆ ಕೀರುತಿಗೆ ಒಂದು ಗಂಡು ಚಿ. ಸಂಯಮ. ಆರತಿಗೆ ಒಂದು ಹೆಣ್ಣು ಕು. ಕ್ಷಮಾ ಜಿನಿಸಿರುವರು. ಮಮ್ಮೊಕ್ಕಳೊಡನೆ ಈ ಪುಣ್ಯದಂಪತಿಗಳು ಸೇರಿಕೊಂಡು ಧರ್ಮ ಪ್ರಭಾವನೆ ಮಾಡುತ್ತಿರುವರು.

ಇವರ ಮನೆ ಅಭಿನವಸಮವಸರಣವಾಗಿದೆ. ಯಾರು ಹೋದರು. ಧಾರ್ಮಿಕವನ್ನೇ ಮಾತಾಡಬೆಕು. ಲೌಕಿಕಕ್ಕೆ ಇಲ್ಲಿ ಅವಕಾಶವಿಲ್ಲ .ಇವರ ಮೊಮ್ಮಕ್ಕಳೂ ಜೀವಂತ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನವಾಗಿರುವರು. ಅನಂತರರಾಜಯ್ಯ ದಂಪತಿಗಳು ಸಮ್ಯಕ್‌ಚಾರಿತ್ರವಾಗಿರುವರು.

ಒಟ್ಟಾರೆ ಶ್ರೀ ಎಂ. ಸಿ.  ಅನಂತರಾಜಯ್ಯವರು ದಾನಚಿಂತಾಮಣಿಗಳು. ಇವರ ಧರ್ಮಪತ್ನಿ ಕೌಸಲ್ಯಮ್ಮನವರು ಸಮ್ಯಕ್ತ್ವ ಚೂಡಾಮಣಿಗಳು. ಇವರ ಮಗಳೂ ಅಳಿಯ ಮತ್ತು ಮೊಮ್ಮಕ್ಕಳು ಭವ್ಯ ಚಿಂತಾಮಣಿಗಳಾಗಿರುವರು. ಭೂಮಿಯಲ್ಲೇ ಈ ಸಂಸಾರ ಸಾರೋದಯರು ಸ್ವರ್ಗವನ್ನು ಕಾಣುತ್ತಿರುವರು. ಸಂತೃಪ್ತರಾಗಿರುವರು. ಆಚಾರ್ಯರತ್ನರಾದ ಜೈನ ಪಾವನ ಕ್ಷೇತ್ರಗಳ ಸಂರಕ್ಷಕರಾದ ಮುನಿಶ್ರೀ ವಿದ್ಯಾನಂದರನ್ನೂ, ಮುನಿಶ್ರೀ ಚಾರಿತ್ರಚಕ್ರವರ್ತಿ ವಿದ್ಯಾಸಾಗರರನ್ನೂ ವರ್ಷಕ್ಕೆ ಎರಡು ಬಾರಿ ಯಾದರೂ ಈ ದಂಪತಿಗಳು ಮಕ್ಕಳು ಮೊಮ್ಮಕ್ಕಳೊಡನೆ ಹೋಗಿ ದರ್ಶನ ಮಾಡಿ ಆಹಾರದಾನ ಕೊಟ್ಟು ತಮ್ಮ ಸಮ್ಯಕ್ತ್ವವನ್ನು ರೀಚಾರ್ಜ್ ಮಾಡಿಸಿ ಕೊಂಡು ಬರುತ್ತಿರುವರು. ಮುನಿಗಳ ನುಡಿಮುತ್ತನ್ನು ಸಂಗ್ರಹಿಸಿ ಪ್ರಕಟಿಸಿರುವರು ಅನಂತರಾಜಯ್ಯನವರ  ಸಂಸಾರವೆಂದರೆ ವಿಶ್ವಾನುಕಂಪ ಮತ್ತು ವಿಶ್ವಮೈತ್ರಿಯ ಆಗರವಾಗಿದೆ. ಸಮ್ಯಕ್ತ್ವದ ಸಾಗರವಾಗಿದೆ. ಧರ್ಮಪ್ರಭಾವನೆಯ ಅಂಗಳವಾಗಿದೆ. ಜಿಲ್ಲೆಗೊಂದು ಇಂಥ ಮನೆತನವಿದ್ದರೆ ಈ ಕಲಿಕಾಲವೂ ಉತ್ಸಾರ್ಪಣಿಯಾಗದಿರದು.

ಶ್ರೀ  ಆರ್. ಜೆ. ನೇಮಿರಾಜಯ್ಯನವರು –ತುಮಕೂರು

ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೋಕು ರಮಾಪುರದಲ್ಲಿ ಶ್ರೀ ಜ್ವಾಲಪ್ಪ ಮತ್ತು ಶ್ರೀಮತಿ ಅನಂತಮ್ಮನವರು ಆದರ್ಶ ದಂಪತಿಗಳಾಗಿದ್ದರು. ಇವರ ಮೂರನೆಯ ಮಗ ಶ್ರೀ ನೇಮಿರಾಜಯ್ಯನವರು. ಇವರು ಸು ೧೯೨೦ರಲ್ಲಿ ಜನಿಸಿದರು. ಬಿ. ಎ. ಮಾಡಿ ಆಮೇಲೆ ಮಹಾರಾಷ್ಟ್ರದಲ್ಲಿ ಎಲ್. ಎಲ್. ಬಿ. ಮಾಡಿದರು ವಕೀಲಿ ವೃತ್ತಿ ಹಿಡಿಸದೆ ತಮ್ಮ ಪೂರ್ವಜರ ವ್ಯಾಪಾರ ವೃತ್ತಿಯನ್ನೇ ಬಲವಾಗಿ ಹಿಡಿದರು. ತುಮೂಕೂರಿನಲ್ಲಿ ಮಂಡಿ ಪ್ರಾರಂಭಿಸಿದರು. ವ್ಯಾಪಾರದಲ್ಲೂ ಇವರು ಧರ್ಮ ಮಾರ್ಗ ಅನುಸರಿಸಿ ಶ್ರೀಮಂತರಾದರು. ಎರಡು ಎಣ್ಣೆ ಗಿರಿಣಿ ನಡೆಸಿದರು. ಅಜಿತ ಕೊಟ್ಟರು. ಈಗ ಆತ. ಬಿ.ಎ. ಮಾಡಿ ಬೆಂಗಳೂರಲ್ಲಿ ಫ್ಯಾಕ್ಟರಿಯಲ್ಲಿ ೬೦೦೦ರೂ. ಸಂಬಳ ಪಡೆಯುತ್ತಿರುವನು. ದಿನವೂ ಈತ ಶ್ರೀ ನೇಮಿರಾಜಯ್ಯನವರನ್ನು ನೆನೆದು ಭಾವ ಪೂಜೆ ಮಾಡುತ್ತಿರುವನು.

ಶ್ರೀ ನೇಮಿರಾಜಯ್ಯನವರು. ೧೯೪೪ರಲ್ಲಿ ಹಿಂದೂಪುರದ ಅಣಿಕಾರ್ ದೇವ ರಾಜಯ್ಯನವರ ಮೂರನೆಯ ಪುತ್ರಿ ಶಾರದಮ್ಮನವರನ್ನು ಮದುವೆಯಾದರು. ಇವರೂ ಧರ್ಮ ಪರಾಯಣರಾಗಿದ್ದರು. ದೀನದಲಿತರಿಗಾಗಿ ಮರುಕ ನೋಡಿಸಿ ಅವರ ಕಷ್ಟಗಳನ್ನು ಪರಿಹರಿಸುತ್ತಿದ್ದರು. ಈ ದಂಪತಿಗಳು. ೧೯೬೫ರಲ್ಲಿ ರನ್ನನ ಅಜಿತಪುರಾಣ ಸಂಗ್ರಹವನ್ನು ಪ್ರಕಟಿಸಿ ಶಾಸ್ತ್ರದಾನ ಮಾಡಿದರು. ಜಿನಾಲಯ ,ಜಿನಮುನಿ ,ಜೈನ ಸಾಹಿತ್ಯ ಇವುಗಳಿಗೆ ಈ ಆದರ್ಶ ದಂಪತಿಗಳು ಎಂದೂ ಇಲ್ಲವೆನ್ನದೆ ಮುಕ್ತ ಹಸ್ತರಾಗಿ ಸಹಾಯ ಮಾಡುತ್ತಾ ಬಂದರು. ಇವರು ಕೊಟ್ಟಷ್ಟೂ ಇವರ ಐಶ್ವರ್ಯ ಬೆಲೆಯುತ್ತಾ ಹೋಯಿತು.ಪ್ರತಿವರ್ಷವೂ. ನನ್ನ (ಜಿ. ಬ್ರಹ್ಮಪ್ಪ) ಗ್ರಂಥ ಪ್ರಕಾಶನಕ್ಕೆ ಕೊಡುಗೈ ದಾನಿಗಳಾಗಿ ಸಹಾಯ ಮಾಡಿರುವರು. ತುಮಕೂರಿಗೆ ಜೈನಮುನಿಗಳು. ಬಂದರೆ ಶ್ರೀಮತಿ ಶಾರದಮ್ಮನವರು ಮನೆಯನ್ನೂ. ಮಕ್ಕಳನ್ನೂ ಮರೆತು ಅವರ ಸೇವೆಗೆ ನಿಲ್ಲುತ್ತಿದ್ದರು. ಇವರು ಪ್ರಚಾರ ಬಯಸದೆ ಎಲೆಮರೆ ಕಾಯಾಗಿ ಬಾಳಿದರು. ಗುಪ್ತ ಭಕ್ತರಾಗಿ ಸದಾ ಪಂಚನಮಸ್ಕಾರ ಜಪಿಸುತ್ತಾ ಆನಂದ ಪಡುತ್ತಿದ್ದರು.

ಕೊನೆಕೊನೆಗೆ ಶ್ರೀಮತಿ ಶಾರದಮ್ಮನವರು ದಿನಕ್ಕೆ ಒಂದೇ ಊಟ, ಒಂದೇ ನೀರಿನಲ್ಲಿ ತೃಪ್ತರಾಗಿ ಭಗವಂತನ ಕಡೆ ಸಂಪೂರ್ಣವಾಗಿ ತಿರುಗಿದರು. ಕೆಲವೊಮ್ಮೆ ಮೂರು ದಿವಸ ಉಪವಾಸವನ್ನೂ ಮಾಡಿ ದೆಹವನ್ನು ಜ್ರಶಗಿಳಿಸಿದರು. ಆತ್ಮವನ್ನು ವಿಕಾಸ ಮಾಡಿಕೊಂಡರು. ಮನೆಯಲ್ಲಿದ್ದುಕೊಂಡೇ ಆರ್ಯಿಕೆಯಂತೆ ಬಾಳಿದರು. ಪದ್ಮಶ್ರೀ  ಮಹಿಳಾ ಸಮಾಜಕ್ಕೆ ಅಧ್ಯಕ್ಷಿಣಿಯಾಗಿ ಸಾಮಾಜಿಕ ಸೇವೆ ಮಾಡಿದರು. ಇವರ ಮನಸ್ಸಿನಲ್ಲಿ ಸದಾ ಸಮವಸರಣ ವಿರಾಜಮಾನವಾಗಿದ್ದಿತು. ಇಂಗಮ ಜಿನಶಾಸನ ದೇವಿಯಾಗಿ ಜೈನ ಧರ್ಮಪ್ರಭಾವನೆಗೆ ತಮ್ಮ ಬಾಳನ್ನು ಮುಡಿಪು ಕಟ್ಟಿದರು.

ಈ ದಂಪತಿಗಳಿಗೆ ರತ್ನತ್ರಯದಂತೆ ಶ್ರೀ ಆರ್. ಎನ್. ಇಂದ್ರಕುಮಾರ್ ,ಶ್ರೀ ಆರ್, ಎನ್.ಪಾರ್ಶ್ವನಾಥ್ ,ಆರ್. ಎನ್, ಇಂದ್ರಕುಮಾರ್ ,ಶ್ರೀ ಅರ್. ಎನ್. ಪಾರ್ಶ್ವನಾಥ್, ಆರ್. ಎನ್. ಮೋಹನಕುಮಾರ್ ಎಂಬ ಅಪೂರ್ವ ಪುತ್ರರತ್ನರಿರುವರು. ಇವರು. ಯಾವ ದುರ್ವ್ಯಸನಗಳಿಗೂ ಬಲಿಯಾಗದೆ ಮಾತಾಪಿತರ ಹೆಸರನ್ನು ಉಳಿಸಿರುವರು. ವಾಣಿಜ್ಯ. ಕುಶಲರಾದ ಇವರು ತಮ್ಮ ವಹಿವಾಟನ್ನು ಹೆಚ್ಚಿಸಿ ಶ್ರೀಮಂತರಾಗಿರುವರು. ಶ್ರೀ ನೇಮಿರಾಜಯ್ಯ ದಂಪತಿಗಳಿಗೆ

ಏಕಾಕ್ಷರಿ ಬೀಜಮಂತ್ರದಂತೆ ಒಂದು ಕನ್ಯಾಕೌಸ್ತುಭ ರತ್ನಜನನವಾಯಿತು. ಈಕೆಯನ್ನು ಜ್ವಾಲಾಮಾಲ ಎಂದು ಕರೆದುರು. ಈಕೆಯನ್ನು ಅಮೇರಿಕಾದಲ್ಲಿರುವ ಡಾ. ವಸಂತಕುಮಾರ್‌ರವರಿಗೆ ಕೊಟ್ಟು ವಿವಾಹ ಮಾಡಿದರು. ಈಕೆ ಸಂಪೂರ್ಣವಾಗಿ ತಮ್ಮ ತಾಯಂತೆ ಧರ್ಮಪ್ರೇಮಿಯಾಗಿ ನೋಂಪಿಗಳನ್ನಾಚರಿಸುವರು. ಸ್ವಾಧ್ಯಾಯ ಪ್ರೇಮಿಯಾಗಿರುವರು. ಆಗಾಗ ಕರ್ಣಾಟಕದಿಂದ ಅಮೇರಿಕಕ್ಕೆ ಹೋಗುವ ಜೈನಮಠಗಳ ಭಟ್ಟಾರಕರನ್ನು ಅವರು ಇದ್ದುಷ್ಟುದಿನ ಇವರು ಆರೈಕೆ ಮಾಡಿ ಸತ್ಕರಿಸಿ ಬೀಳ್ಕೊಡುವ ಪರಿಪಾಪಿ ಬೆಳೆಸಿಕೊಂಡಿರುವರು.

೧೯೯೬ರಲ್ಲಿ ಶ್ರೀನೇಮಿರಾಜಯ್ಯನವರು ಕಾಲವಾದರು. ೧೪ನೆಯ ದಿನ ಇವರ ಸ್ಮರಣಾರ್ಥ ತುಮಕೂರಿನ ಪಾರಿಶ್ವನಾಥಸ್ವಾಮಿಗೆ ವಿಶೇಷ ಪೂಜೆಯಾದಾಗ ನಾನು ಮತ್ತು ಶ್ರೀ ಅ. ನಾ. ಚಂದ್ರಕೀರ್ತಿಗಳು. ಹೋಗಿದ್ದೆವು. ಬಂಧುಬಳಗ ಕಲೆತಿದ್ದಿತು. ನಾನು ನೇಮಿರಾಜಯ್ಯನವರ ಗುಣಗಾನಮಾಡಿ ಶ್ರದ್ಧಾಂಜಲಿ ಅರ್ಪಿಸಿದೆನು.

ದಾನಚಿಂತಾಮಣಿ ಗ್ರಂಥ ಅಚ್ಚಾಗುತ್ತಿದೆ. ಇದಕ್ಕೆ ನೂರು ಡಾಲರ್ ಕೊಡಿ ಎಂದು ಆರ್. ಎನ್. ಜ್ವಾಲಾಮಾಲಿನಿಯವರನ್ನು ಕೇಳಿದೆ. ಇವರು. ಧಾರಾಳವಾಗಿ ಹತ್ತುಸಾವಿರ ರೂಗಳನ್ನು ನನಗೆ ಕೊಟ್ಟರು. ನಾನು ಕೇಳಿದ್ದಕ್ಕಿಂತ ಹೆಚ್ಚಿಗೆ ಕೊಟ್ಟರು. ಇವರು ಮರಿ ದಾನಚಿಂತಾಮಣಿಯಾಗಿರುವರು. ಹುಟ್ಟಿದ ನಾಡಿನಿಂದ ಬಹುದೂರವಿದ್ದರೂ ಆಗೊಮ್ಮೆ ಈಗೊಮ್ಮೆ ಬಂದಾಗ ಯಾವುದಾರೂ ಜಿನಾಲಯದ ಜೀರ್ಣೋದ್ಧಾರಕ್ಕೋ ಯಾವುದಾದರೂ ಜೈನಗ್ರಂಥ ಪ್ರಕಾಶನಕ್ಕೋ ಸಹಾಯ ಮಾಡದೆ ಹೋಗುವುದಿಲ್ಲ. ಇವರು ಭಾರತಕ್ಕ ಬರುವುದೇ ಧರ್ಮಪ್ರಭಾವನೆಗೆ ನೀರಿನಂತೆ ಧನ ವ್ಯಯ ಮಾಡುವರು. ಇವರ ಪತಿ ಶ್ರೀ ವಸಂತಕುಮಾರರು ಪತ್ನಿಯ ಧರ್ಮಕರ್‍ಯಗಳಿಗೆ ಪೋತ್ಸಾಹಕೊಟ್ಟು ಅನುಮೋದನ ಪುಣ್ಯ ಬಾಚುತ್ತಿರುವರು.

ಟಿ.ವಿ. ಸುವಿತ್ರಾದೇವಿ ತುಮೂಕೂರು

ಟಿ. ವಿ. ಸುಮಿತ್ರಾದೇವಿಯರು ತುಮಕೂರಿನ ಡಿ. ವೆಂಕರಾಯಪ್ಪ ಮತ್ತು ಎ. ಕೆ. ವಿ. ಪಾಯಮ್ಮ ನವರಹಿರಿಯ ಪುತ್ರಿ. ಇವರು. ಬಾಲ್ಯದಲ್ಲಿ ಅಜ್ಜಿ ಮನೆಯಲ್ಲೂ, ತಾಯಿ ಮನೆಯಲ್ಲೂ ಬಹಳ

ಅಕ್ಕರೆಯಿಂದ ಬೆಳೆದರು. ೯ನೆ ವಯಸ್ಸಿನಲ್ಲಿ ತಾಯಿಯ ತರಬೇತಿಯಿಂದ ಸಂಗೀತ ಅಭ್ಯಾಸ ಆಗಿತ್ತು. ಆಮೇಲೆ ಸಂಗೀತ ಭೀಷ್ಮರೆನಿಸಿದ್ದ ಟಿ. ಈ. ಹೊನ್ನಂಜಾಚಾರ್ಯರಲ್ಲಿ ಸಂಗೀತಾಭ್ಯಾಸ ನಡೆಯಿತು. ೧೪ನೆಯ ವಯಸ್ಸಿಗೆ ಬೆಳ್ಳಾವಿಗೋಟಡಿಕೆ ಅನಂತರಾಜಪ್ಪನವರ ನಾಲ್ಕನೆ ಮಕ್ಕಳಾದ ಜಿ. ಎ. ಲಕ್ಷೀಪತಿಯವ ರೊಡನೆ ವಿವಾಹವಯಿತು.

ಜಿ. ಎಲ್. ಶಾಂತಿ ಪ್ರಸಾದ್ ,ಜಿ. ಎಲ್. ಅನಂತರಾಜ್ ಎಂಬ ಗಂಡು ಮಕ್ಕಳುರಮ, ಸುಜಾತ ಎಂಬ ಸೊಸೆಯಂದಿರು, ಜಿ. ಎಲ್ ನಾಗಲತ, ಜಿ. ಎಲ್. ವನಿತ. ಜಿ. ಎಲ್. ವೀಣಾ, ಜಿ. ಎಲ್. ರೇಖ, ಎಂಬ ನಾಲ್ಕು ಜನ ಹೆಣ್ಣು ಮಕ್ಕಳು, ಎಸ್. ಎನ್. ಅಭಯಕುಮಾರ್, ಟಿ. ಎನ್. ಪುಷ್ಪರಾಜ್ ,ಕೆ .ಎನ್ ಮೋಹನ್ ಪ್ರ ಸಾದ್, ಟಿ. ಎ. ಜಿನರಾಜ್ ಎಂಬ ನಾಲ್ಕು ಜನ ಅಳಿಯಂದಿರು. ಇವರೆಲ್ಲರೂ ಧಾರ್ಮಿಕರಾಗಿ ಸಂಸಾರ ನಡೆಸುತ್ತಿದ್ದಾರೆ. ಇವರಿಗೆ ೯ ಜನ ಮೊಮ್ಮಕ್ಕಳಿದ್ದಾರೆ.

ಇವರು ಪದ್ಮಾಂಬ ಜೈನ ಮಹಿಳಾ ಸಮಾಜದಲ್ಲಿ ೨೫ ವರ್ಷ ಸೆಕ್ರೆಟರಿಯಾಗಿ ಕೆಲಸ ನಿರ್ವಹಿಸಿ ಈಗ ಸಮಾಜದ ವೈಸ್‌ಪ್ರೆಸಿಡೆಂಟ್ ಆಗಿದ್ದಾರೆ. ಜೈನಮಂಡಲಿಯ ಸದಸ್ಯರಾಗಿ ಮತ್ತು ತ್ಯಾಗಿ ಸೇವಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಈ ಊರಿನಲ್ಲಿ ನಡೆಯುವ ಧಾರ್ಮಿಕ ಸಮಾರಂಭಗಳಲ್ಲಿ ಆರಾಧನೆಗಳ ಸಮಯದಲ್ಲಿ ಮಕ್ಕಳಿಂದ ಜಿನ ವಹಿಸಿ. ಸುಮಿತ್ರಾದೇವಿಯವರು. ಜೈನ ಮಹಿಳೆಯರನ್ನೆಲ್ಲಾ ಹೊಂದಿ ಕೊಂಡು ಪ್ರಭಾವನೆ ಮಾಡಿದ್ದಾರೆ. ಇವರುಗೆ ಜಿನಭಕ್ತಿಗೀತೆಗಳನ್ನು ಕಲಿಯಲು ಎಷ್ಟು ಇಷ್ಟವೊ ಕಲಿಸಲು ಅಷ್ಟೇ ಇಷ್ಟ. ಆದರೆ ಅದಕ್ಕೆ ಕಾಲ ಒದಗಿಬರಬೇಕಲ್ಲ. ಈಗ ಕಾಲಲಬ್ಧಿ ಒದಗಿದೆ. ಈಗ ತುಮಕೂರಿನಲ್ಲಿ ಶ್ರೀಪದ್ಮಾಂಬ ಜೈನ ಮಹಿಳಾ ಸಮಾಜದವತಿಯಿಂದ ಜಿನಭಜನಾ ಕಾರ್ಯಕ್ರಮ ಏರ್ಪಡಿಸಿದ್ದಾರೆ. ಸುಮಿತ್ರಾದೇವಿಯರು ಎಲ್ಲಿ ಭಜನೆ ನಡೆಯುತ್ತೋ ಆ ಮನೆಗೆ ಹೋಗಿ ಭಜನೆ ಹೇಳಿಕೊಡುತ್ತಾರೆ.

ಇವರು ರತ್ನಾಕರವರ್ಣಿಯ ಅಧ್ಯಾತ್ಮಗೀತಗಳನ್ನು ತಮ್ಮ ಗುರುಗಳಲ್ಲಿ ಶಾಸ್ತ್ರೀಯವಾಗಿ ಕಲಿತು ತಮ್ಮ ಪುತ್ರಿಯೊಡನೆ ಹಲವಾರು ಕಡೆಗಳಲ್ಲಿ ಹಾಡಿ ಮೆಚ್ಚಿಗೆಗಳಿಸಿದ್ದಾರೆ. ರತ್ನಾಕರವರ್ಣಿಯ ಗೀತೆಗಳನ್ನು ಶಾಸ್ತ್ರೀಯವಾಗಿ ಹಾಡಿದವರಲ್ಲಿ ಇವರೇ ಮೊದಲಿಗರು. ಶ್ರೀ ಪದ್ಮಾಂಬ ಮಹಿಳಾ

ಸಮಾಜದ ವತಿಯಿಂದ ರತ್ನಾಕರನ ಗೀತೆಗಳ ಧ್ವನಿ ಸುರುಳಿಯನ್ನು ಮಾಡಲಾಗಿದೆ. ಇದಲ್ಲದೆ ಪುಟ್ಟೇನ ಹಳ್ಳಿಯಲ್ಲಿ ಬಿಡುಗಡೆಯಾದ ಶೀತಲ ತೀರ್ಥಂಕರ ಹೆಸರಿನ ಧ್ವನಿ ಸುರುಳಿಯಲ್ಲೂ ಇವರು ಹಾಡಿದ್ದಾರೆ. ರತ್ನತ್ರಯ ಕ್ಯಾಸೆಟ್‌ನಲ್ಲೂ ಹಾಡಿದ್ದಾರೆ.

ಕುಚ್ಚಂಗಿಯಲ್ಲಿ ತುಂಬಾ ಪ್ರಾಚೀನವಾದ ದೇವಸ್ಥಾನ ಇದೆ. ಅಲ್ಲಿ ಜೈನರ ಮನೆ ಎರಡಿವೆ. ಆದ್ದಂರಿದ ಪೂಜಾನಿಧಿ ಸ್ಥಾಪಿಸಬೇಕು ಎಂದು ತೀರ್ಮಾನಿಸಲಾಯ್ತು . ಆಗ ಸುಮಿತ್ರರವರು. ೩೬೫ದಿನ ಪೂಜೆ ವ್ಯವಸ್ಥೆ ಆಗುವವರೆಗೂ ಕಾಲಿಗೆ ಪಾದರಕ್ಷೆ ಹಾಕುವುದಿಲ್ಲ ಎಂದು ಸಂಕಲ್ಪ ಮಾಡಿ ಮೂರುವರೆ ವರ್ಷಕ್ಕೆ ಅದನ್ನು ಸಾಧನೆ ಮಾಡಿದ್ದಾರೆ.

ಈಗ ಜಿ. ಬ್ರಹ್ಮಪ್ಪನವರು. ಹೇಳಿದಂತೆ ಕುಚ್ಚಂಗಿಗೆ ಸಂಜೆ ಪೂಜೆಗೆಂದು ೧೦೦ ರೂಗಳನ್ನು ವಸೂಲಿ ಮಾಡಲು ಸಂಕಲ್ಪ ಮಾಡಿದ್ದಾರೆ. ಈ ಕಾರ್ಯ ನೆರವೇರಲಿ ಎಂದು ಭಗವಂತನ ಪ್ರಾರ್ಥಿಸುತ್ತೇವೆ.

೮೧ನೇ ಇಸವಿಯಲ್ಲಿ ನಡೆದ ಶ್ರವಣಬೆಳಗುಳದ ಭಗವಾನ್ ಬಾಹುಬಲಿ ಸ್ವಾಮಿಯ ಮಸ್ತಕಾಭಿಷೇಕದ ಸಮಯದಲ್ಲಿ ಮಹಿಳಾಸಮ್ಮೇಳನ ನಡೆಯಿತು. ಆಗ ಬಬ್ಬರಿಗೆ ೧೧ ರೂ.  ನಂತೆ ಮಹಿಳೆಯರಲ್ಲಿ ವಸೂಲಿ ಮಾಡಬೇಕು ಎಂದು ಸುಮಿತ್ರಾದೇವಿ ಯವರಿಗೆ ವಹಿಸಿದಾಗ ತುಮೂಕೂರು ಡಿಸ್ಟ್ರಿಕ್ಟ್ ಪೂರ್ತಿ ಸುತ್ತಿ ಒಂದು ಮನೆಗೆ ರೂ. ೧೧ರಂತೆ ನಾಲ್ಕುವರೆ ಸಾವಿರ ರೂ. ಗಳನ್ನು ವಸೂಲಿ ಮಾಡಿದ್ದರು.

ಶ್ರೀ ಎಚ್.ವಿ. ನವರತ್ನಕುಮಾರ್ –ಸಾಲಿಗ್ರಾಮ

ಸಾಲಿಗ್ರಾಮದ ಹಸ್ತಂತರದ ಬೀದಿಯಲ್ಲಿ ವಾಸವಾಗಿದ್ದ ಶ್ರಾವಕ ಶ್ರೇಷ್ಠ ದಂಪತಿಗಳಾದ ಶ್ರೀ ಎಚ್.ವಿ. ನವರತ್ನಕುಮಾರ್‌ರವರು ಜನಿಸಿದರು. ವ್ಯಾಪಾರ ವ್ಯವಹಾರಗಳಿಗೆ ಬೇಕಾಗುವಷ್ಟು ವಿಧ್ಯಾರ್ಜನೆಯನ್ನು ಸಾಲಿಗ್ರಾಮದಲ್ಲಿಯೇ ಮಾಡಿದರು. ತಮ್ಮ ತಂದೆಯವರೊಡನೆ ವ್ಯಾಪಾರವನ್ನು ಮುಂದುವರಿಸಿಕೊಂಡು ಪ್ರಖ್ಯಾತಿಯನ್ನು ಪಡೆದು ವರ್ತಕ ಶ್ರೇಷ್ಠರೆನಿಸಿದರು. ಇವರು ಪ್ರಾಪ್ತ ವಯಸ್ಸಿಗೆ ಬಂದಾಗ ಸರಗೂರಿನ ಧರ್ಮಾನುರಗಿಗಳಾದ ಶ್ರೀ ಎಸ್. ವರ್ಧಮಾನಯ್ಯ ಶ್ರೀಮತಿ ರುಕ್ಷಿಣಮ್ಮನವರ ಈ ಆದರ್ಶ ದಂಪತಿಗಳಿಗೆ ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗನಾಗಿ ಇಬ್ಬರು

ಮಕ್ಕಳು ಜನಿಸಿದರು. ವ್ಯಾಪಾರದ ಅಭಿವೃದ್ಧಿಗಾಗಿ ಶ್ರೀ ಮಹಾವೀರ ರಸ್ತೆಯಲ್ಲಿ 'ಪದ್ಮನಿಲಯ' ಎಂಬ ಮನೆಯನ್ನು ಕಟ್ಟಿಸಿ 'ಶ್ರೀಜಿನೇಶ್ ಟ್ರೇಡರ್ಸ್' ಎಂಬ ನಾಮಾಂಕಿತದಿಂದ ಅಂಗಡಿಯನ್ನು ಪ್ರಾರಂಭಿಸಿದರು. ಹಿರಿಯ ಮಗಳಾದ ಚಿ. ಸೌ. ಪ್ರಮೀಣಕುಮಾರಿ (ಪ್ರೇಮ) ಎಂ. ಎ. ಪದವೀರಧರೆ, ಮಗ ಚಿ. ಎಚ್. ಎನ್ ಧರಣೇಶ್ ಜೈನ್ ಐ. ಬಿ. ಎ. ವ್ಯಾಸಂಗ ಮಾಡುತ್ತಿದ್ದನು. ಈ ಕುಟುಂಬ ಶ್ರಾವಕರ ಷಟ್ಕರ್ಮಗಳನ್ನು ಪಾಲಿಸುತ್ತಾ ಆದರ್ಶ ಶ್ರಾವಕರೆನಿಸಿದ್ದಾರೆ. ತಾ. ೨೦-೧೦-೯೩ರಲ್ಲಿ ಕುಟುಂಬ ಸಮೇತರಾಗಿ ಶ್ರೀ ಸಮ್ಮೇದಗಿರಿ ಯಾತ್ರೆಯನ್ನು ಮಾಡಿರುತ್ತಾರೆ. ಇಂತಹ ಸುಖೀಕುರುಂಬಕ್ಕೆ ಜೀವನದಲ್ಲಿ ಮರೆಲಾಗದಂತಹ ಘಟನೆ ನಡೆಯಿತು. ಇವರ ಪುತ್ರ ಚಿ. ಎಚ್. ಎನ್. ಧರಣೇಶ್ ಜೈನ ತನ್ನ ೧೯ನೇ ವಯಸ್ಸಿನಲ್ಲಿ ದೈವಾದೀನನಾದನು. ಅರಳಿ ಬಾಳಬೇಕಿದ್ದ ಕುಸುಮ ಮೊಗ್ಗಿನಲ್ಲಿಯೇ ಬಾಡಿ ಹೋಯಿತು. ಈ ಆಘಾತವನ್ನು ತಾಳಲಾರದೆ ತಂದೆತಯಿಗಳು ಮತ್ತು ಅಕ್ಕ ತತ್ತರಿಸಿ ಹೊದರು. 'ಪುತ್ರ ಶೋಕಂ ನಿರಂತರಂ ' ಎಂಬಂತೆ ಈ ದುಃಖದಿಂದ ಚೇತರಿಸಿಕೊಳ್ಳಲು ತಮ್ಮ ಮನಸ್ಸನ್ನು ಆಧ್ಯಾತ್ಮಿಕ ಚಿಂತನೆ ಕಡೆಗೆ ಹರಿಸಿದರು. 'ದಾನಂ ದಾರಿದ್ರ್ಯ ನಾಶಂ' ಎಂಬ ಸೂಕ್ತಿಯಂತೆ ಸತ್ಪಾತ್ರಗಳಿಗೆ ಮಡತೊಡೆಗಿದರು. ತಾರೀಖ ೧೦-೧೦-೧೯೯೮ರಂದು ಸಾಲಿಗ್ರಾಮದ ಕೋಟಬಸದಿಯಲ್ಲಿ ಕಂಬದ ಹಳ್ಳಿಯ ಪಟ್ಟಾಚಾರ್ಯರಾದ ಪರಮ ಪೂಜ್ಯ ಶ್ರೀ ಶ್ರೀ ಭಾನುಕೀರ್ತಿ ಭಟ್ಟಾರಕರ ಸನ್ನಿಧಿಯಲ್ಲಿ ನಡೆದ ಶ್ರೀ ಬ್ರಹ್ಮದೇವರ ಪ್ರತಿಷ್ಠಾಪನೆ ಮತ್ತು ಶ್ರೀ ಶೀತಲ ತೀರ್ಥಂಕರರ ಆರಾಧನಾ ಮಹೋತ್ಸವ ಸಂದರ್ಭದಲ್ಲಿ, ಸಾಲಿಗ್ರಾಮದಲ್ಲಿ ನಿರ್ಮಿಸುತ್ತಿರುವ ಬಾಹುಬಲಿ ಭವನದ ವೇದಿಕೆಯದಲ್ಲಿ, ಸಾಲಿಗ್ರಾಮದಲ್ಲಿ ನಿರ್ಮಿಸುತ್ತಿರುವ ಬಾಹುಬಲಿ ಭವನದ ವೇದಿಕೆಯ ನಿರ್ಮಾಣಕ್ಕಾಗಿ ತಮ್ಮ ಪುತ್ರ ಎಚ್. ಎನ್ ಧರಣೇಶ್ ಜೈನ್ರವರ ಸ್ಮರಣಾರ್ಥ ೫೧,೧೧೧ ರೂಪಯಿಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ. ಮೈಸೂರಿನ ತೊಣಚಿಕೊಪ್ಪಲಿನಲ್ಲಿ ಜೈನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಗಲೆಂದು ಕಟ್ಟಿರುವ ಮಹಾವೀರ ವಿದ್ಯಾರ್ಥಿನಿಲಯದ ಕೊಠಡಿ ನಿರ್ಮಾಣಕ್ಕಾಗಿ ೩೫,೦೦೦ ರೂ.ಗಳನ್ನು ಶ್ರೀರಂಗಪಟ್ಟದಲ್ಲಿ ಕಟ್ಟಲಾಗುತ್ತಿರುವ ಶ್ರೀ ಜಿನದತ್ತರಾಯ ಭವನಕ್ಕೆ ೧೦,೦೦೧ ರೂ. ಗಳನ್ನು ದಾನ ಮಾಡಿದ್ದಾರೆ. ತಾ ೨೨-೪-೯೮ರಂದು ತಮ್ಮ ಮಗಳಾದ ಚಿ. ಸೌ. ಎಚ್. ಎನ್. ಪ್ರವೀಣಿಕುಮಾರಿ (ಪೇಮ) ಯನ್ನು ಬೆಂಗಳೂರಿನ ಶ್ರೀ

ಎಚ್. ಎಸ್. ಎಸ್. ಸುಮತಿರಾಜಯ್ಯ ಶ್ರೀಮತಿ ಜಯರತ್ನಮ್ಮನವರ ದ್ವಿತೀಯ ಪುತ್ರ ಚಿ. ರಾ. ಮಹಾವೀರರವರೊಡನೆ ಲಗ್ನ ಮಾಡಿರುತ್ತಾರೆ. ಸದಾ ಮುನಿಸೇವೆ. ಶಾಸ್ತ್ರದಾನ. ಸತ್ಪಾತ್ರ ದಾನಗಳನ್ನು ಮಾಡುತ್ತಾ ಉತ್ತಮ ಶ್ರಾವಕರಾಗಿದ್ದಾರೆ. 'ದಾನ ಚಿಂತಾಮಣಿ' ಎಂಬ ಈ ಗ್ರಂಥದ ಪ್ರಕಟಣೆಗೆ ೨೦೦೧ ರೂಪಾಯಿಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ. ಕೋಟೆ ಬಸದಿಗೆ ಮಾರ್ಬಲ್ ಹಾಕಲು ೨೫೦೦೦ ಕೊಟ್ಟಿರುವರು.

ಸಂಶೋಧನಾ ಪೂಜಾಸಕ್ತೆ ರತ್ನಮ್ಮ – ಮೈಸೂರು

"ಜಾತಿಯೊಳೆಲ್ಲಂ ಉತ್ತಮಮೆನಿಪ್ಪ ವಿಪ್ರಕುಲಂಜಗೆ ನಂಬಲ್ ಏಂ ಮಾತೋ– ಜಿನೇಂದ್ರ ಧರ್ಮಮೆವಲಂ" ಯಾವ ಮಾನಸಿಕ ತುಮುಲ ವಿಪ್ಲವಕ್ಕೆ ,ಭಾವೋದ್ವೇಗಕ್ಕೆಪಕ್ಕಾಗಿ ಭೀಮದೇರಾಯ ಹೀಗೆ ನುಡಿದನೋ ! ಅಂತೂ ರತ್ನಮ್ಮನ ಒಂಟಿಬಾಳಿನಲ್ಲಿ ಕೊನೆಯಿಲ್ಲದ ಕಣ್ಣೀರು ಒರೆಸುವ ಕೈಯಾಗಿ ಪಂಚನಮಸ್ಕಾರ ಮಹಾಮಂತ್ರ ಫಲನೀಡಿತು.

ಸುಮಾರು ೧೯೫೧–೫೨ರಲ್ಲಿ ವಿಜಯವಾಡ ನಡೆದ 'ವಾಜಪೇಯ ಮಹಾಯಜ್ಞದ ಅಂತ್ಯದಲ್ಲಿ ಪುರುಷವಾಜಿಯನ್ನು ಕರೆತಂದು ಯೂಪಕ್ಕೆ ಕಟ್ಟಿ ಸಂಪ್ರೋಕ್ಷಿಸಿ ತಕ್ಷಣ ಚೂರಿಯಿಂದ ಹೊಟ್ಟೆ ಬಗೆದು ಅದರ ವಪೆಯನ್ನು ಕಿತ್ತು ಯಜ್ಞದ ಆಹುತಿಯಾಗಿ ಸ್ವಲ್ಪ ಭಾಗ ನೀಡಿ ಅನಂತರ ಉಳಿದುದನ್ನು ಯಜ್ಞ ಪ್ರಸಾದವೆಂದು ಹಂಚಿದುದನ್ನು ಕಣ್ಣಾರೆ ಕಂಡಾಗ ಅವರ ಮನಸ್ಸು ರೋಸಿ ಹೋಯಿತು. ತನ್ನ ಮನೆಯಲ್ಲಿ , ಮಠದಲ್ಲಿ ಪಶುಬಲಿಯಿಲ್ಲ. ಆದರೆ ಬ್ರಾಹ್ಮಣರಲ್ಲಿ ಇಂತಹ ಯಜ್ಞ ನಡೆದುದನ್ನು ಕಂಡಾಗ ಮಾನಸಿಕವಾಗಿ ನೊಂದು ಮುಂದಿನ ಜನ್ಮದಲ್ಲಿ ಜೈನಳಾಗಿ ಹುಟ್ಟುವ ಸಂಕಲ್ಪ ಮಾಡಿದರು.

ಹುಟ್ಟಿದ ಮನೆ ಶ್ರೀಮಂತವರ್ಗದ್ದು. ಆದರೆ ಹುಟ್ಟಿ ಹದಿನೆಂಟು ದಿವಸಕ್ಕೆ ಪಿತೃವಿಯೋಗ. ತಾಯಿಯೇ ದಿಕ್ಕಾಗಿ ಸಾಕಿ ಸಲಹಿದರು. ಆಸ್ತಿ ದಾಯಾದಿಗಳ ವಶವಾಯಿತು. ಅವರ ಊರು ನಂಜನಗೂಡು.

ಶಾಲಾದಿನಗಳಲ್ಲಿ ಅಪೂರ್ವ ಮೇಧಾವಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆಗಳಲ್ಲಿ ಬಹುಮಾನ ಮೀಸಲು. ಸ್ವಪ್ರಯತ್ನದಿಂದ. ತನ್ನ ಕಾಲಮೇಲೆ ನಿಲ್ಲುವ ಅದಮ್ಯ ಬಯಕೆ. ಕಾಲೇಜಿನಲ್ಲಿ ಕನ್ನಡ

ಆನರ್ಸ್ ವಿದ್ಯಾರ್ಥಿಯಾಗಿದ್ದಾಗ ಅತಿರಥ ಮಹಾರಥರ ಸಂಗಡ ಓದುವ ಪುಣ್ಯ . ಕಾಣದ ತಂದೆಯ ಪ್ರೀತಿ ತೋರಿಸಿದ ಗುರುವರ್ಗ ,ಆತ್ಮೀಯರಿಲ್ಲದ ಒಂಟಿ ಬದುಕಿಗೆ ಗೆಳೆಯರು ನಿಕಟ ಸೋದರರಾಗಿ ಸಹಾಯ ನೀಡಿದರು. ಆಗಲೇ ಸಹಾಧ್ಯಾಯಿ ಬ್ರಹ್ಮಪ್ಪನವರು ಸ್ನೇಹಿತರಾದರು. ಮುಂದೆ ಶ್ರೀಮತಿ ಜಯಮ್ಮನವರ ಆದರಣೆ, ಪ್ರೀತಿ ವಿಶ್ವಾಸಗಳಿಂದ ಬ್ರಹ್ಮಪ್ಪನವರು ಅವರಿಗೆ ಅಣ್ಣನಾದರು. ಕಷ್ಟ ಹಂಚಿಕೊಂಡು. ಕಣ್ಣೀರು. ಒರೆಸಲು ಮುಂದೆ ಬಂದರು. ಜಯಮ್ಮನವರು. ಅತ್ತಿಗೆಯಾದರು.

ಬ್ರಾಹ್ಮಣಾದ್ದಂರಿಂದ ಸರ್ಕಾರದಲ್ಲಿ ಯಾವ ರಿಯಾಯಿತಿಯೂ ಸಲ್ಲದೆ ಕೇವಲ ಪ್ರತಿಭೆಯಿಂದ ಕಾಲೇಜು ಅಧ್ಯಾಪಕರದರು. ನೂರಾರು. ಲೇಖನಗಳು ಪ್ರಕಟವಾದುವು. ಆದರೆ ತನ್ನವರೇ ಶತ್ರುಗಳು. ಒಳಗಿನ ನೋವು ನಾಶದ ಹಾದಿ ಹಿಡಿಸಿತು. ವಿದ್ಯಾರ್ಥಿಗಳಿಗೆ ಮೆಚ್ಚಿನ ಅಧ್ಯಾಪಕಿ. ಯಾವುದೇ ಸಮಾರಂಭವಿರಲಿ, ಸಾಂಸ್ಕೃತಿಕ ಕಾರ್ಯ ಕ್ರಮಗಳಲ್ಲಿ ಮುಖ್ಯವಾಗಿ ನೃತ್ಯ. ನಾಟಕಗಳಲ್ಲಿ ಅವರ ಕೈವಾಡ, ಕೊಡೆಗೆ ಇರುತ್ತಿತ್ತು.

ಮದುವೆಯಾಗಿ ಹೆಣ್ತನದ ಪರಿಪೂರ್ಣತೆಯ ಫಲವಾಗಿ ೧೯-೩-೧೯೬ ರಂದು ಮಗ ಹುಟ್ಟಿದ. ಒಂಟಿ ಜೀವನದ ಊರುಗೋಲಾಗಿ ,ಕುರುಡುಬಾಳಿಗೆ ಬೆಳಕಾಗಿ ಬಂದನು.

ಪೂನ, ಡೆಹರಾಡೂನ್‌ಗಳಲ್ಲಿ ಬೇಸಿಗೆ ಶಿಬಿರಗಳಲ್ಲಿ ಭಾಷಾ ಶಾಸ್ತ್ರಾಧ್ಯನ. ಪ್ರತಿಭೆಯಿಂದ ವಿದೇಶಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅವಕಾಶ. ಸಿಕ್ಕಿ. ಪಾಶ್ಚಿಮಾತ್ಯ ಪ್ರಾಧ್ಯಾಪಕರು ಪ್ರೋತ್ಸಾಹ ನೀಡಿದರೂ ಸಹ ಸ್ಥಳೀಯ ಪ್ರಾಧ್ಯಾಪಕರುಗಳಿಗೆ ಅಸಮಾಧಾನವಿದ್ದುದರಿಂದ ಅವಕಾಶ ಸಿಗಲಿಲ್ಲ. ಆದರೆ ಮನೆಯ ಒಳಗಿನ ನೋವು ಆರದ ಗಾಯವಾಗಿ ಉರಿಯುತ್ತಿರುವಾಗ ಹೊರಗಿನವರ ಗಾಯದ ನೋವು ಬಾಧೆ ಕೊಡಲಿಲ್ಲ.

೧೯೬೪-ಏಪ್ರಿಲ್, ಮೇ, ಜೂನ್‌ನಲ್ಲಿ ಕಾಂಪ್ಟಿಯಲ್ಲಿ ಸೈನಿಕ ಶಿಕ್ಷಣ ! ವೀರಾಧಿ ವೀರರ ಒಡನಾಟ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಷೂಟಿಂಗ್ ಸ್ಪರ್ಧೆಗಳಲ್ಲಿ ಮೆಚ್ಚಿನ ಬಹುಮಾನ. ಆಗ ಬರೆದ ಲೇಖನ **"The Fight Eight"** ಡಿ. ಜಿ. ಯವರ ಗಮನ ಸೆಳೆಯಿತು.

ಕಾಂಪ್ಟಿಯಲ್ಲಿ ಎರಡು ದಿವಸ ಒಟಿಗೆ ರಜ ಬಂದಾಗ ಗುಜರಾತ್ ಆಫೀಸರ್ ಕ್ಯಾಡೆಟ್ ಮೃದು ಲಷಾ ಜೊತೆ ನಾಗಪುರದ ಶ್ವೇತಾಂಬರ ಸನ್ಯಾಸಿನಿಯರಾಗಲು ಶಿಕ್ಷಣ ನೀಡುತ್ತಿದ್ದ ಶಾಲೆಯಲ್ಲಿ

ಸನ್ಯಾಸಿನಿಯರ ಸಂಗಡ ಇರುವ ಸದವಕಾಶ ದೊರೆಯಿತು. ಮಹಾ  ಶ್ರೀಮಂತ ಪುತ್ರಿಯರು. ಎಂ . ಎ. ಪದವೀಧರರು ಸ್ವಸಂತೋಷದಿಂದ ಸನ್ಯಾಸಿನಿಯಾರಾಗಿರುವುದನ್ನು ಕಂಡು ಮನಸ್ಸು ಜಿನಪದವನ್ನು ಧ್ಯಾನಿಸಿತು.

ಆ ಸನ್ಯಾಸಿನಿಯರ  ಮಠದಲ್ಲಿ ಎರಡು ದಿವಸ ಕಾಲಕಳೆದುದು. ಡಿ.ಜಿ. ಯವರಿಗೆ ತಲಪಿಸಿದ ಗುಪ್ತ ಸಂದೇಶದಲ್ಲಿ ಅಡಕವಾಗುದ್ದಿತು. ಪರಿಣಾಮ ಮುಂದೆ ಅಖಿಲ ಭಾರತ ಮಹಿಳಾ ಕ್ಯಾಡೆಟ್‌ಗಳ ಬೇಸಿಗೆ ಶಿಬಿರ –ಕಾಲ್ಕಾ (ಪಂಜಾಬ್) ದಲ್ಲಿ ಶ್ರೀಮತಿ ಮೋಹಿನಿಸಿಂಗ್ ಮತ್ತು ಡಿ. ಜಿ. ಮೇಜರ್ ಜನರಲ್ ವೀರೇಂದ್ರಸಿಂಗ್‌ರವರ ಸೌಹರ್ದಾಯತ ಸಂಭಾಷಣೆ. ಅವರ ಆತಿಥ್ಯ. ಇವರೊಂದಿಗೆ ಕರ್ನಾಟಕದ ಕ್ಯಾಢೆಟ್‌ಗಳು ಮತ್ತು ಇಬ್ಬರು ಶ್ವೇತಾಂಬರ ಕ್ಯಾಡೆಟ್ ಬಂಧುಗಳೂ ಸಹ ಡಿ. ಜಿ .ಯವರ ಆತಿಥ್ಯ ಪಡೆದರು.

ಎನ್. ಸಿ. ಸಿ .ಆಫೀಸರ್ ಆದ್ದರಿಂದ ಕನ್ನಡದ ವೀರಾಗ್ರಣಿ ಫೀಲ್ಡ್ ಮಾರ್ಷಲ್ ಕಾರಿಯಪ್ಪನವರ ಆತಿಥ್ಯ, ಪರಮವೀರ ಚಕ್ರಪಡೆದ ನಿವೃತ ಕರ್ನಲ್ ರಾಣಿ ಸಾಹೇಬ್ ಮತ್ತು ಮಹಾವೀರ ಚಕ್ರ ಪಡೆದ ಕರ್ನಲ್ ಥಾಪಾ (ಲದ್ಧಕ್ ಯುದ್ಧದ ಪ್ರಖ್ಯಾತವೀರ) ಮುಂತಾದ ವೀರರನ್ನು ಸಂಧಿಸಿ ಸಂಭಾಷಿಸುವ ಸದವಕಾಶ ಲಭಿಸಿತು. ಪೂರ್ಣಾವಧಿ ಸೈನಿಕಳಾಗಿ ರೋಗಿಗಳ ಶಿಶ್ರೂಷಾ ವಿಭಾಗದಲ್ಲಿ ಸೇವೆ. ಸಲ್ಲಿಸಲು ಆಸೆ ಪಟ್ಟಿದ್ದರು. ಆದರೆ ಬರವಣಿಗೆ. ಷೂಟಿಂಗ್ ,ಡ್ರಿಲ್. ಪರೀಕ್ಷೆಗಳಲ್ಲಿ ಪಾಸಾದರೂ ಸಹ ದೇಹ ಪರೀಕ್ಷೆಯಲ್ಲಿ ಸಿಸೇರಿಯನ್ ಗಾಯದ ಕಲೆ ಕಂಡ ವೈದ್ಯರು ಜೋರಾಗಿ ಓಡುವುದು ಸಾಧ್ಯಾವಿಲ್ಲವೆಂದು ಕಮೀಷನ್ ನಿರಾಕರಿಸಿದರು. ವಿಧಿಯೊಡಿದ ಬಲೆಗೆ ಸಿಲುಕಿ ನೊಂದು ಬೇಸುತ್ತು ಎನ್. ಸಿ. ಸಿ. ಅಧಿಕಾರಕ್ಕೆ ರಾಜಿನಾಮ ಸಲ್ಲಿಸಿದರು.

ನಿವೃತ್ತಳಾದ ನಂತರ ಸ್ವಸಂತೋಷಕ್ಕಾಗಿ “ಕನ್ನಡ ನಾಡಿಗೆ ಜೈನ ಮಹಿಳೆಯರ ಕೊಡುಗೆ” ವಿಷಯದ ಮೇಲೆ ಮಹಾಪ್ರಬಂದ ಬರೆಯಲು ತೊಡಗಿದರು. ದಿಗ್ದರ್ಶಕರು ಡಾ. ಎಂ. ಡಿ. ವಸಂತರಾಜ್, ಮುಖ್ಯಸ್ಥರು, ಜೈನಪೀಠ, ಮಾನಸಗಂಗೋತ್ರಿ, ಮೈಸೂರು. ಸುಮಾರು ಆರು ನೂರು ಪುಟಗಳು ಟೈಪ್ ಆದ ನಂತರ ಡಾ. ಎಂ. ಡಿ. ವಸಂತರಾಜ್‌ರವರು ಮದರಾಸು ವಿಶ್ವವಿದ್ಯಾನಿಲಯಕ್ಕೆ

ಹೋದ ನಂತರ ಅಧಿಕಾರದ ಕೈ ಬದಲಾದಾಗ ವಿಶ್ವವಿದ್ಯಾನಿಲಯ 'ಪ್ರಬಂಧವನ್ನು ಕಾಲದ ನಿಯಮಕ್ಕೆ ಒಳಪಡಿಸಿಲ್ಲ' ವೆಂದು ಆಕ್ಷೇಪವೆತ್ತಿತ್ತು. ಹೀಗಾಗಿ ಪ್ರಬಂಧವನ್ನು ವಿದ್ವವಿದ್ಯಾನಿಲಯಕ್ಕೆ ಸಲ್ಲಿಸಲಿಲ್ಲ.

ಈ ಮಹಾಪ್ರಬಂಧದ ವಿಷಯ ಸಂಗ್ರಹಣೆಗಾಗಿ ನಾಡಿನಾದ್ಯಂತ ಸಂಚರಿಸಿ ನೂರಾರು ಮಂದಿ ಜೈನರನ್ನು, ಸಾವಿರಾರು ಮುರಿದು, ಹಾಳಾದ ಜಿನಾಲಯಗಳು ಮತ್ತು ಪ್ರಸುತ್ತ ಪೂಜೆ ನಡೆಯುತ್ತಿರುವ ಮಂದಿರಗಳು, ಮಠಗಳನ್ನು ಸಂದರ್ಶಿಸಿ ಸಹಾಯ ಪಡೆದಿದ್ದಾರೆ. ಡಾ. ಬಾ. ರಾ. ಗೋಪಾಲರವರು ತಮ್ಮ ಅನರ್ಘ್ಯ ಶಾಸನ ಸಂಗ್ರಹಗಳನ್ನು ಅಭ್ಯಾಸ ಮಾಡಲು ನೆರವು ನೀಡಿದ್ದಾರೆ. ಎಲ್ಲ ಐತಿಹಸಿಕ ಸಮಸ್ಯೆಗಳಿಗೆ ಉತ್ತರಿಸಿದ್ದಾರೆ.

ನೆರವಾದ ಮುಖ್ಯ ಸಂಸ್ಥೆಗಳು ಮತ್ತು ಮಠಗಳು : ೧. ಶ್ರೀ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕರು –ಶ್ರವಣಬೆಳುಗೊಳ. ಸುಮಾರು ಹದಿನಾಲ್ಕು ದಿವಸ ಆಶ್ರಯ ನೀಡಿ ಮತೀಯ ಸಂಬಂಧವಾದ ಎಲ್ಲ ಸಮಸ್ಯೆಗಳನ್ನು ಪರಿಹರಿಸಿದ್ದರಿಂದ ಮುಂದೆ ಯಾರ ಬಳಿಯೂ ಏನನ್ನೂ ಕೇಳಬೇಕಾಗಲಿಲ್ಲ.

೨. ಶ್ರೀ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕು –ಮೂಡುಬಿದರೆ. ಎರಡು ದಿವಸ ಆಶ್ರಯ ನೀಡಿದ್ದಾರೆ.

೩. ಧರ್ಮಾಧಿಕಾರಿಗಳು, ಧರ್ಮಪಾರಾಯಣಿ ರತ್ನಮ್ಮ ಹೆಗ್ಗಡಿತಿಯವರು ಐನೂರು ಒಂದು ರೂಪಾಯಿ ಸಹಾಯಧನ ನೀಡಿದ್ದಾರೆ. ಮತ್ತು ಪ್ರಖ್ಯಾತ ಯೋಧೆ ಸೋಮಲದೇವಿಯ ಮನೋವಿಶ್ಲೇಷಣೆಯನ್ನು ಕೇಳಿ ತೃಪ್ತಿ ಪಟ್ಟಿದ್ದಾರೆ.

೪. ಶ್ರೀ ಶ್ರೀ ಶ್ರೀ ಲಲಿತಕೀರ್ತೀ ಭಟ್ಟಾರಕರು –ಕಾರ್ಕಳ.

೫. ಶ್ರೀ ಶ್ರೀ ಶ್ರೀ ಲಕ್ಷ್ಮೀಸೇನ ಭಟ್ಟಾರಕರು–ಸಿಂಹನಗದ್ದೆ.

೬. ಶ್ರೀ ಶ್ರೀ ಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕರು –ಹೊಂಬುಜ (ಎರಡು ದಿವಸ)

೭. ಹಲವಾರು ಶ್ವೇತಾಂಬರ ಮಠಗಳು. ಮಹನೀಯರು.

೮. ಶ್ರೀ ಶ್ರೀ ಶ್ರೀ ವಿದ್ಯಾನಂದ ಮುನಿಗಳು –ಮೋರ್‌ಹಾವ್ ಬಳಿ ತಂಗಿದ್ದಾಗ ಮರೆಯಲಾಗದ ರಾಜಾತಿಥ್ಯ, ರಾಜಾನ್ನ ನೀಡಿ ಸತ್ಕರಿಸಿದರು. ಒಂದು ಲೇಖಣಿಯನ್ನು ತನ್ನ ಬಳಿ ಇಟ್ಟುಕೊಳ್ಳದ ದಿಗಂಬರ ಸನ್ಯಾಸಿಯ ಆದರ ಸತ್ಕಾರಗಳನ್ನು. ವೈಭವವನ್ನು ಕಂಡಾಗ ಅವರ ಮನಸ್ಸಿನಲ್ಲಿ 'ಶಿವಂ

ದಿಗಂಬರಂ, ಅವಧೂತಂ ದಿಗಂಬರಂ' ಎಂಬ ಪೂಜ್ಯ ಭಾವ ಮೂಡಿ ಮನಸ್ಸು ಜಿನಪದವನ್ನು ನೆನೆಯಿತು.

೯. ಯುಗ ಪ್ರವರ್ತಕ ಇತಿಹಾಸತಜ್ಞ ಶ್ರೀರಾಮ್ ಸಾಠೆಯವರನ್ನು ಮೈಸೂರಿನಲ್ಲಿ ಭೇಟಿ ಮಾಡಿದರು. ಅವರ ಅಭಿಪ್ರಾಯದಲ್ಲಿ ಭದ್ರಬಾಹುಗಳು ದೇಹತ್ಯಾಗ ಮಾಡಿದಾಗ ಮಹಾಕಾಯ ಪಡೆದಿರಬಹುದು. ಕಲ್ಲು ಸಂಭ್ರಮಿಸಿ ಸಿಡಿದು ಪಾದದ ಗುರುತು ಮೂಡಿರಬಹುದು. ಮಂಡ್ಯ ಜಿಲ್ಲೆಯ ಜಿನಾಲಯಗಳನ್ನು ಒಡೆದು ನರಸಿಂಹ ದೇವಾಲಯಗಳನ್ನು ಮಾಡಿರಬಹುದು ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸಿದರು.

೧೦. ಉಜ್ಜಯಿನಿ ಭಾಟಾಮಾರ್ಗ –ಭದ್ರಬಾಹು ಮಹಾಮಾರ್ಗದಲ್ಲಿ ನಡೆಯುತ್ತ ಶ್ವೇತಾಂಬರ ಮಂದಿರಕ್ಕೆ ಬಂದಾಗ ಅಲ್ಲಿನ ಅರ್ಚಕರು ಭದ್ರಬಾಹುಗಳ ಸಮಾಧಿ ನೇಪಾಳದಲ್ಲಿದೆ. ಎಂದು ತಿಳಿಸಿದರು. ಭದ್ರಬಾಹು ದಕ್ಷಿಣಕ್ಕೆ ಬಂದ ದಾರಿ–ರಾಜ್ ನಂದನ್‌ಗಾವ್, ನಂದ್‌ಗಾವ್, ಮೋರ್‌ಗಾವ್, ನಾಗುರ್ಜುನ್ ಸಾಗರ್ , ಕರ್ನಾಟಿಕ –ಒಂದು ಉಪಾಪಥ.

೧೧. ನಾಗರ ಕೇರಿಯ ಪಾಳು ಜಿನಾಲಯಗಳಲ್ಲಿ ಅಲೆಯುತ್ತಿರುವಾಗ ಮಳೆ ಬಂದು ನಿಂತ ನಂತರ ಮಧ್ಯಾಹ್ನ ಮೂರೂವರೆ ಸಮಯದಲಿ ಪಾರ್ಶ್ವನಾಥ ವಿಗ್ರಹದ ಮೇಲೆ ನಾಗರಹಾವು ಹರಿದಾಡಿ ದರ್ಶನ ನೀಡಿತು. ಈ ದೃಶ್ಯವನ್ನು ಹಲವಾರು ಮಂದಿನೋಡಿಧನ್ಯರಾದರು.

೧೨. ಮಾತನಾಡುವ ಮಂಜುನಾಥ, ಮಂಜಯ್ಯಹೆಗ್ಗಡೆಗಳನ್ನು ೧೯೫೦ರಲ್ಲಿ ಧರ್ಮಸ್ಥಳಕ್ಕೆ ಭೇಟಿ ನೀಡಿ ಕಂಡಿದ್ದರು. (ಆಗ ನೇತ್ರಾವತಿಯನ್ನು ದೋಣಿಯಲ್ಲಿ ದಾಟಬೇಕಿತ್ತು ಹೆಗ್ಗಡೆಗಳ ಮನೆಯಲ್ಲಿ ಬೆಳ್ಳಿ ಲೋಟ, ತಟ್ಟೆಗಳಲ್ಲಿ ಕಾಫಿ ತಿಂಡಿ ಕೊಡುತ್ತಿದ್ದರು. ಬ್ರಾಹ್ಮಣರ ಅಡಿಗೆ ದೇವದೇವನ ಪ್ರತಿನಿಧಿ ಧರ್ಮಾಸನದಲ್ಲಿ ಮಂಡಿಸಿದಾಗ ಹೇಳಿದ ಭವಿಷ್ಯವಾಣಿ ಮದುವೆಯಾದವರಿಗೆಲ್ಲ ಸುಖವೆಲ್ಲಿದೆ ? ಮದುವೆಯಾಗುತ್ತದೆ. ಅಡ್ಡಿ ಆಪತ್ತು ಗಳೊಂದಿಗಿನ ಬಾಳು' ಆ ಭವಿಷ್ಯ ಕಣಕಣ ಸತ್ಯವಾಯಿತು. **(life with encumbarences )** ರತ್ನವರ್ಮ ಹೆಗ್ಗಡೆಯವರು ತಾವು ನಡೆಸುತ್ತಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಮೂರು ಬಾರಿ ಅವಕಾಶ ನೀಡಿ ಸನ್ಮಾನಿಸಿದರು.

೧೩. ಜೈನಳಾಗುವ ಮಿಡಿತ ರೂಪತಾಳಿತು. ಬ್ರಹ್ಮಪ್ಪನವರು ಕಾಲೇಜಿನ ಕೊಠಡಿಯಲ್ಲಿ ಇದ್ದ ಸ್ಥಿತಿಯಲ್ಲಿ (ಅಪವಿತ್ರಃ ಪವಿತ್ರೋವ.. . ಸಬಾಹ್ಯಾಭ್ಯತರ ಶುಚಿಃ ) ಪಂಚನಮಸ್ಕಾರ ಮಂತ್ರ ದೀಕ್ಷೆ ನೀಡಿದರು.

ಅತ್ತೆ ಲೇಖನ ಬರೆಯುತ್ತಿದ್ದಾಗ ಸಂಗೀತ, ನಾಟ್ಯದ ಸಂಗತಿಗಳನ್ನೆಲ್ಲ ವಿವರಿಸುತ್ತಿದ್ದಾಗ ನಿಂತ ಮೆಟ್ಟಿನಲ್ಲಿಯೇ ಸೊಸೆ ಗಾಯತ್ರಿ ನಾಟ್ಯವಾಡುತ್ತಿದ್ದಳು. ಅವಳಿದ್ದ ಕಡೆ ರಸಿಕತೆಯ ಸುಳಿಗಾಳಿ ,ನಗೆಯ ಹೊನಲು, ಸುಖದ ಸುಗ್ಗಿ, ಒಲವಿನಿ ಚಿಲುಮೆ, ಸೊಸೆಯಲ್ಲ. ಒಳಿದು ಬಂದ ಪ್ರೇಯಸಿಯಾದಳು. ಕುಲಪುತ್ರನನ್ನು ಅತ್ತೆಗೆ ನೀಡಿ ಒಂದು ಸೆಕೆಂಡಿನಲ್ಲಿ ಕಣ್ಮರೆಯಾದಳು. ರನ್ನನ ಗದಾಯುದ್ಧ ಮಂಗಳ ಶ್ಲೋಕ ಶ್ರೀಯುವತೀ ಪ್ರಿಯಂ' ಪದ್ಯಕ್ಕೆ ತೀರ್ಥಂಕರ ಪರವಾಗಿ ಅರ್ಥ ಹೇಳಿ ಅತ್ತೆ ವಿವರಿಸಿದಂತೆ ಅಭಿನಯ ಹಾಕಿ ನಾಟ್ಯವಾಡಿದುದೇ ಕಡೆಯಾಯಿತು. ಶ್ರವಣಬೆಳಗೊಳದ ಪಟ್ಟಾಚಾರ್ಯರು ಜಾತ್ರೆಯಲ್ಲಿ ಅವಕಾಶ ನೀಡಿದ್ದರು.

ಈ ಕಷ್ಟದಲ್ಲಿ ಕೈಹಿಡಿದು ನಡೆಸಿದ ಬೆಳಕು ಆತ್ಮಹತ್ಯೆಯಿಂದ ರಕ್ಷಿಸಿದ ದಿವ್ಯಶಕ್ತಿ ಪಂಚನಮಸ್ಕಾರ ಪಠಣ

ಬ್ರಹ್ಮಪ್ಪನವರ ನಿರಂತರ ಪ್ರೋತ್ಸಾಹದಿಂದ ಶ್ರೀ. ಶಾಂತರಾಜಶಾಸ್ತ್ರಿ ಟ್ರಸ್ಟ್ ಜಯನಗರ ಬೆಂಗಳೂರುರವರ ಸಹಾಯ ದೊರೆಯಿತು. ಮಹಾಪ್ರಬಂಧದ ಒಂದು ಅಧ್ಯಾಯ "ಕನ್ನಡನಾಡಿನ ವೀರಜೈನ ಮಹಿಳೆಯರು" ಅನ್ನ ಸಂಚಾಲಕ ಕಾರ್ಯದರ್ಶಿ ಶ್ರೀಮಾನ್ ಎಸ್. ಜಿತ್ರೇಂದ್ರಕುಮಾರ್ ರವರು ಕೃಪೆಯಿಟ್ಟು ಪ್ರಕಟಿಸಿದರು.

ಎರಡನೆಯ ಅಧ್ಯಾಯ 'ಭಗ್ನ ಜಿನಾಲಯಗಳು' ಅತ್ತಿಮಬ್ಬೆ ಪ್ರಕಾಶನ ಶ್ರೀಮಾನ್ ಅ. ನ. ಚಂದ್ರಕೀರ್ತಿಗಳು ಪ್ರಕಟಿಸುತ್ತಿದ್ದಾರೆ. ಪ್ರಕಟನ ಕಾರ್ಯ ಮುಗಿದಿದೆ.

ಮೂರನೆಯ ಅಧ್ಯಾಯ 'ಕಂತಿಯರು ಮತ್ತು ಮುಡುಪಿದವರು.' ಪ್ರಕಟಿಸುವ ಹೊಣೆಯನ್ನು ಶ್ರೀಮಾನ್ ಚಂದ್ರಕೀರ್ತಿಯವರು ಹೊತ್ತಿದ್ದಾರೆ.

ಶ್ರೀ ಆರ್ . ನಾಗರಾಜ್ರವರು–ತಾಳ್ಯ

ಚಿತ್ರದುರ್ಗ ಜಿಲ್ಲೆಯ ತಾಳ್ಯ ಗ್ರಾಮದಲ್ಲಿ ಆಸನ್ನಭವ್ಯರಾದ ಶ್ರೀ ದೇವಶೆಟ್ಟಿ ರಾಜಪ್ಪನವರು ಸಮ್ಯಕ್ತ್ವ ಶೀಲೆಯಾದ ಶ್ರೀಮತಿ ನಾಗಮ್ಮನವರನ್ನು ಮದುವೆಯಾಗಿದ್ದರು. ಈ ದಂಪತಿಗಳು ಆಹಾರ ,ಅಭಯ, ಔಷಧಿ ಮತ್ತು. ಶಾಸ್ತ್ರದಾನ ವಿನೋದರಾಗಿದ್ದರು. ಇವರ ಜಿನಪೂಜಾಫಲ ಕಣ್ ಬಿಟ್ಟಂತೆ ಇವರಿಗೆ ೧೯೪೨ರಲ್ಲಿ ಶ್ರೀ ಆರ್. ನಾಗರಾಜುರವರು ಪುತ್ರರತ್ನವಾಗಿ ಜನಿಸಿದರು. ಈ ದಂಪತಿಗಳು ಊರಿಗೆಲ್ಲ ಬೇಕಾದವರರಾಗಿ ದೀನದಲಿತರನ್ನು ಕಂಡಾಗ ಕರಗಿ ಹೋಗುತ್ತಿದ್ದರು. ಈ ಮಾತಾಪಿತರ ಸನ್ಮಾರ್ಗವೇ ಶ್ರೀ ನಾಗರಾಜುರವರ ಬಾಳ್ವಿಗೆ ಭದ್ರಬುನಾದಿಯಾಯಿತು.

ಕನಕಕ್ಕೆ ಕಂಪು ಮೂಡಿದಂತೆ ಶ್ರೀನಾಗರಾಜುರವರನ್ನು ಬೆಂಗೂಳೂರಿನ ಉಪದೇಶಕ ಶ್ರೀ ಪದ್ಮನಾಭಯ್ಯನವರ ಪುತ್ರಿ ರತ್ನಮ್ಮನವರು ವರಿಸಿದರು. ದೇವಪೂಜೆ ,ಗುರೂಪಾಸನೆ, ಸ್ವಾಧ್ಯಯ. ಸಂಯಮ, ತಪ ಮತ್ತು ದಾನಗಳು ಈ ದಂಪತಿಗಳ ದಿನಚರಿಯಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡು ಇವರು ಆದರ್ಶದಂಪತಿಗಳಾದರು. ವ್ಯವಹಾರ ನಿಶ್ಚ್ಚಯಗಳೆರಡೂ ಇವರಿಗೆ ಒಲಿದಂತೆ ಚಿ.ರಾ. ನೇಮಿಚಂದ್ರತೇಜಸ್ವಿ (ಬಿ.ಇ. ಎಲೆಕ್ಟ್ರಾ ನಿಕ್ ಮತ್ತು ಕಂಪ್ಯೂಟರ್ ಇಂಜಿನಿಯರ್ ) ಎಂಬ ಪುತ್ರರತ್ನನೂ ,ಚಿ. ಸೌ. ಯಶಸ್ವತಿ ಎಂಬ ಕನ್ಯಾ ಕೌಸ್ತುಭ ರತ್ನವೂ ಪುತ್ರಿಯಾಗಿ ಅವತರಿಸಿ ಇ ದಂಪತಿಗಳು ಸಂಸಾರ ಸಾರೋದಯರೆನಿಸಿದರು. ಶ್ರೀಮತಿ ರತ್ನಮ್ಮನವರು ಅಕಾಲಮರಣಕ್ಕೆ ತುತ್ತಾದ ಮೇಲೆ ಶ್ರೀ ನಾಗರಾಜುರವರು ದಾವಣಗೆರೆಯ ಇಜಾರಿ ವಾಸಪ್ಪನವರ ಮೊಮ್ಮಗಳಾದ ಶ್ರೀಮತಿ ಪದ್ಮಲತಾರವರನ್ನು ವರಿಸಿದರು. ರತ್ನವನ್ನು ನೀಗಿಕೊಂಡು ಇವರು ಚಿಂತಾಮಣಿಯನ್ನು ಪಡೆದಂತಾಯಿತು.

ಶ್ರೀ ಆರ್. ನಾಗರಾಜುರವರು ಚಿತ್ರದುರ್ಗದ ಲಕ್ಷ್ಮಿ ಬಜಾರಿನಲ್ಲಿ ಪದ್ಮಾಂಬ ಎಂಪೊರಿಯಂ ಎಂಬ ಕಟ್‌ಪೀಸ್ ಬಟ್ಟೆ ವ್ಯಾಪಾರ ಪ್ರಾರಂಭಿಸಿದರು. ಲಕ್ಷ್ಮಿ ಬಜಾರಿನಲ್ಲಿ ಇವರು ತಂಗಿದ ಮೇಲೆ ಲಕ್ಷ್ಮಿ ಬಂದು ಇವರ ಮನೆಯಲ್ಲಿ ಕಥಕ್ಕಳಿಯಾಡಿದಳು ! ಶ್ರೀನಾಗರಾಜ ದಂಪತಿಗಳು ಕ್ರೋಧ, ಮಾನ, ಮಾಯ, ಲೋಭಗಳಿಗೆ ವಶರಾಗದೆ ದಿನವೂ ಆಹಾರ ದಾನ ಮಾಡಿ ಸಂತೋಷ ಪಡುವರು ಕಂಗೆಟ್ಟವರಿಗೆ ಧೈರ್ಯ ತುಂಬಿ ಅಭಯ ದಾನ ಮಾಡಿ ಸ್ನೆಮ್ಮದಿ ಕೊಡುವರು. ರೋಗಿಗಳಿಗೆ

ಔಷದೋಪಚಾರಮಾಡಿ ಹೊಂಕರಿಸುವ ಯಮನನ್ನು ಉಪಾಯವಾಗಿ ಸಾಗುಹಾಕುವರು. ಜೈನ ಧರ್ಮಗ್ರಂಥಗಳ ಪ್ರಕಾಶನದ ಸುದ್ದಿ ಇವರ ಕವಿಗೆ ಬಿದ್ದರೆ ಸಾಕು ತಾವೇ ಹುಡುಕಿಕೊಂಡು ಬಂದು ಕೊಡುಗೈ ದಾನಿಗಳಾಗಿ ಹಣಕೊಂಡುವರು. ಜಿನಭಕ್ತಿ ,ಜೀವದಯೆ, ಕರ್ತವ್ಯ ನಿಷ್ಠ ಈ ದಂಪತಿಗಳ ಜೀವಂತ ರತ್ನತ್ರಯಗಳಾದವು.

ಕರ್ಣಾಟಕದ ಎಲ್ಲಾ ಜಿನಾಲಯಗಳೂ ಸುವ್ಯವಸ್ಥಿತವಗಬೇಕು, ನಿತ್ಯಪೂಜೆಗೆ ಎಲ್ಲೂ ಕೊರೆತೆಯಾಗಬಾರದು. ನೂತನ ಜಿನಾಲಯಗಳ ನಿರ್ಮಾಣಕ್ಕಾಗಿ ಸದಾ ಇವರು ಹಾತೊರೆದು ಕಳಕಳಿಯಿಂದ ಪರಿತಪಿಸುವರು. ಆಯಾ ಊರಿನ ಧರ್ಮದರ್ಶಿಗಳನ್ನು ಕಂಡು ಕೊರತೆ ಬಿದ್ದ ಹಣವನ್ನು ತಾವು ಪೂರೈಸುವರು. ಜಿನಾಲಯಗಳ ಜೀರ್ಣೋದ್ಧಾರವಾಗುವಾಗಲು ಇವರು ಹೇಗೋ ವಾಸನೆ ಹಿಡಿದು ಪ್ರತ್ಯಕ್ಷವಾಗಿ ಸಹಾಯ ಮಾಡುವರು. ಎಲೆಕೇತನಹಳ್ಳಿ ,ಅಗಳಿ. ಬಿದರೆ, ಬೆಂಗಳೂರು ಪುಟ್ಟೇನಹಳ್ಳಿ. ಈ ಸ್ಥಳಗಳಿಗೆ ಇವರಾಗೇ ಧಾವಿಸಿ ಜಿನಾಲಯಗಳ ನಿರ್ಮಾಣಕ್ಕೆ ತೊರೆ ಬಿಟ್ಟ ಕಾಮಧೇನುವಾಗಿ ಸಹಾಯ ಮಾಡಿರುವರು. ಹೊಂಬುಜ ನರಸಿಂಹರಾಜಪುರ ಕ್ಷೇತ್ರಗಳಿಗೂ ಇವರು ಧಾರಾಳವಾಗಿ ಧನ ಸಹಾಯ ಮಾಡಿರುವರು. ಚಾಮುಂಡರಾಯ ಪುರಾಣ. ರತ್ನಾಕರ ವೈಭವ, ಪುಣ್ಯಬಂಧ, ದಾನ ಚಿಂತಾಮಣಿ ಕೃತಿಗಳ ಪ್ರಕಟಣೆಗೂ ಇವರು ಶಕ್ತಿಮೀರಿ ಧನ ಸಹಾಯ ಮಾಡಿರುವರು.

ಬಿದರೆ ಜಿನಾಲಯದ ಮಹದ್ವಾರ ಹಟ್ಟದ ಬಸ್ತಿಯ ಪ್ರಾಕಾರದಲ್ಲಿ ಸಭಾಮಂಟಪ ಬೆಳಗುಲಿ ಜಿನಾಲಯದ ಮಾನ ಸ್ತಂಭ ,ದಾವಣಗೆರೆ ಶ್ರೀಮಹಾವೀರ ವಿದ್ಯಾರ್ಥಿ ನಿಲಯದಲ್ಲಿ ಒಂದು ಕೊಠಡಿ, ಇವುಗಳು ಶ್ರೀನಾಗರಾಜು ದಂಪತಿಗಳ ಔದಾರ್ಯಕ್ಕೆ ಸಾಕ್ಷಿಯಾಗಿವೆ. ಆಂಧ್ರ ಪ್ರದೇಶದ ಚಪ್ಪಗಿರಿ. ಚಿತ್ರುದುರ್ಗ ಮತ್ತು ತಾಳ್ಯದಲ್ಲಿ ಹಿಂದೂ ದೇವಾಲಯಗಳ ನಿರ್ಮಾಣಕ್ಕೂ ಇವರು ಸಹಾಯಮಾಡಿ ಸರ್ವಧರ್ಮಸಮನ್ವಯ ದೃಷ್ಟಿಯನ್ನು ಮೆರೆದಿರುವರು.

ಹಣ್ಣದ ಜೈನಸಮಾಜ ಶ್ರೀ ಸಿಂಹನಗದ್ದೆಕ್ಷೇತ್ರುದ ಪರಮ ಪೂಜ್ಯ ಸ್ವಸ್ತಿಶ್ರೀ ಲಕ್ಷ್ಮಿ ಸೇನೆ ಭಟ್ಟಾರಕರ ದಿವ್ಯ ಸನ್ನಿಧಿಯಲ್ಲಿ ಶ್ರೀನಾಗರಾಜರನ್ನು ಧರ್ಮ ವತ್ಸಲ. ದಾನ ದಿವಾಕರ ಎಂದು ಕೊಂಡಾಡಿದೆ. ಎಲೆಕ್ಯಾತನ ಹಳ್ಳಿಯ ಶ್ರೀ೧೦೦೮ ಭಗ್ವಾವಾನ್ ಬಾಹು ಬಲಿ ಮತ್ತು ೨೪

ತೀರ್ಥಂಕರರ ಪಂಚಕಲ್ಯಾಣ ಸಮಿತಿಯು ಹೊಂಬುಜದ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕರ ಭವ್ಯ ಸನ್ನಿದಿಯಲ್ಲಿ ಇವರನ್ನು ೧೫-೯೯೮ರಂದು ದಾನ ಶಿರೋಮಣಿ ಎಂದು ಕರೆದು ಬಿನ್ನವತ್ತಳೆ ಕೊಟ್ಟಿದೆ.

ಶ್ರೀ ರಾಮಚಂದ್ರಪ್ಪ ಸ್ಯಾದ್ವಾದಿ ತುಮಕೂರು

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೋಕಿನಲ್ಲಿ ಬಿದರೆ ಎಂಬ ಗ್ರಾಮವಿದೆ. ಕೆಲವು ಶತಮನಗಳಿಂದ ಇಲ್ಲಿ ಜೈನ ಪ್ರಭಾವ ಜೀವಂತವಾಗಿದೆ. ಸಾಧಕರು. ಶ್ರಾವಕರು ಈ ಗ್ರಾಮದಲ್ಲಿದ್ದು ಧಾರ್ಮಿಕ ಪರಿಸರ ಇಂದಿಗೂ ಅಚ್ಚಳಿಯದಂತಿದೆ. ಇಲ್ಲಿ ಶ್ರೀ ಚಿಕ್ಕ ರಂಗಶೆಟ್ಟಿ ಮತ್ತು ಪುಟ್ಟಲಕ್ಷ್ಮಮ್ಮ ಎಂಬ ದಂಪತಿಗಳು ಜೈನಧರ್ಮ ಪ್ರಭಾವಕ್ಕೊಳ ಗಾದರು. ೧೬-೬-೧೯೩೧ ಈ ದಂಪತಿಗಳಿಗೆ ರಾಮಚಂದ್ರಪ್ಪ ಎಂಬ ಪುತ್ರರತ್ನವಾಯಿತು.

ರಾಮಚಂದ್ರಪ್ಪನವರು ೮ನೇ ವರ್ಷದಲ್ಲೇ ಶ್ರೀ ಪದ್ಮನಂದಿ ಶಾಸ್ತ್ರಿಗಳಿಂದ ಜೀವಂಧರ ಚರಿತೆಯಲ್ಲಿ ಬರುವ ಣಮೋಕಾರ ಮಹಿಮೆಯನ್ನು ಕೇಳಿ ಪ್ರಭಾವಿತರಾಗಿ ಅಣು ವ್ರತಧಾರಿಯಾಗಿ ಈತನಕ ಅಷ್ಟಮೂಲಗುಣಗಳನ್ನು ಪರಿವಾರಸಹಿತ ಪಾಲಿಸಿಕೊಂಡು. ಬಂದಿರುವರು. ಇವರು ಬಿ. ಎ. ಪದವೀಧರರು. ಸಂಸ್ಕೃತ ವಿಶಾರದ, ಹಿಂದಿ ವಿದ್ವಾನ್,ಜೈನಧರ್ಮವಿಶಾರದ ,ಜೈನಕೋವಿದ, ಶಾಸ್ತ್ರಿಪರೀಕ್ಷೆ ಇವುಗಳಲ್ಲಿ ಉತ್ತೀಣರಾಗಿ ಇವಕ್ಕೆ ಪುಟವಿಟ್ಟಂತೆ ಜಿನಭಕ್ತರಾದರು. ವಿನಯಸಂಪನ್ನರಾದರು. ವಿಶ್ವಾನುಕಂಪವನ್ನೂ, ವಿಶ್ವಮೈತ್ರಿಯನ್ನೂ ಮೈಗೂಡಿಸಿಕೊಂಡರು. ಸಮ್ಯಕ್ತ್ವವನ್ನೇ ಉಸಿರಡುವರು. ಜೀವದಯೇದೇ ಇವರ ನಾಡಿ ಮಿಡಿತ. ಇವರ ನಡೆಯಲ್ಲಿ ನುಡಿಯಲ್ಲಿ ಜೀವಹಿತ ತುಂಬಿ ತುಳುಕಾಡುವುದು. ಜಿನಧರ್ಮ ಪ್ರಭಾವನೆಯೇ ಇವರ ಬಾಳ ಗುರಿಯಾಗಿದೆ.

ಇವರು ಅಧ್ಯಾಪಕರಾದರು. ಇವರ ಧರ್ಮಪತ್ನಿಯೂ ಪತಿಪರಾಯಣೆಯಾಗಿ ಪತಿಮೆಚ್ಚಿದ ಜಿನಧರ್ಮವನ್ನು ತಾವೂ ಪಾಲಿಸಿದರು. ಇವರ ದಾಂಪತ್ಯ ಶ್ರುತಿಮಾಡಿಟ್ಟ ವೀಣೆಯಂತಿದೆ. ಇವರ ವಗ ಶ್ರೀ ಬಿ. ಆರ್. ಜಯಪದ್ಮ, ಅಳಿಯ ಜಿ. ಆರ್. ಎಸ್. ಚಂದ್ರು, ಇವರೆಲ್ಲ ಅಣುವ್ರತಧಾರಿಗಳಾಗಿ ಇವರ ಸಂಸಾರ ನೌಕೆ ಸಮವಸರಣಾಭಿ ಮುಖವಾಗಿದೆ.

ಶ್ರೀ ಪದ್ಮನಂದಿಶಾಸ್ತ್ರಿಗಳು. ಶ್ರೀ ಎ. ಶಾಂತಿರಾಜಶಾಸ್ತ್ರೀಗಳು. ಶ್ರೀವರ್ಧಮಾನ ಪಾರ್ಶ್ವನಾಥಶಾಸ್ತ್ರಿಗಳು, ಪೂಜ್ಯ ಅರ್ಕಕೀರ್ತಿ ಮಹಾರಾಜರು. ಕ್ಷು. ಭದ್ರಬಾಹು ಮಹಾರಾಜರು, ಶ್ರೀ ಆಚಾರ್ಯ ವಿದ್ಯಾನಂದರು, ಶ್ರೀ ಆಚಾರ್ಯ. ಕುಂಥುಸಾಗರರು ಈ ಮಹನೀಯರು ಶ್ರೀ ರಾಮಚಂದ್ರಪ್ಪ ಸ್ವಾದ್ವಾದಿಗಳಿಗೆ ಧಾರ್ಮಿಕ ಪಥಕ್ಕೆ ದಾರಿ ದೀಪವಾಗಿರುವರು. ೧೬ವರ್ಷದಿಂದ ಇವರು ಮನೆಯಲ್ಲಿದ್ದು ಕೊಂಡೇ ಪತ್ನಿಯನ್ನು ಒಲಿಸಿ ಅಖಂಡ ಬ್ರಹ್ಮಚರ್ಯ ವ್ರತಪಾಲಿಸುತ್ತಿರುವರು. ಅಜ್ಜನ ಧಾರ್ಮಿಕ ಚರ್ಯೆಯನ್ನು ಕಂಡು ಇವರ ಮೊಮ್ಮಕ್ಕಳು ನಾಲ್ವರೂ ಜಿನಭಕ್ತ ಶಿರೋಮಣಿಗಳಾಗಿರುವರು.

ಧ್ಯಾನ. ಜಪ, ಪೂಜೆ, ಸ್ವಾಧ್ಯಾಯ, ಧರ್ಮಪ್ರಭಾವನೆ, ಪುರಣ ಪ್ರವಚನ, ಧಾರ್ಮಿಕ ಶಿಕ್ಷಣಾರ್ಥಿಗಳಿಗೆ ತರಪೇತು ನೀಡುವುದು ಇವರ ದಿನಚರಿಯ ಕಾಯಕಗಳಾಗಿವೆ. ರಾಹಿತಿಯಾದ ಇವರು ಗದ್ಯ. ಪದ್ಯಗಳೆರಡರಲ್ಲೂ ಸುಮಾರು ೪೦ ಪುಸ್ತಕಗಳನ್ನು ಬರೆದು ಪ್ರಕಟಿಸಿರುವರು.ಎಲ್ಲ ಪುಸ್ತಕಗಳೂ ಜಿನಧರ್ಮದ ಪ್ರಭಾವನೆಗಾಗಿ ಬರೆದವುಗಳಾಗಿವೆ. ಇವುಗಳಲ್ಲಿ ೫ ನಾಟಕಗಳೂ ಸೇರಿವೆ. ಜೈನ ಮಾಸಿಕಗಳಲ್ಲಿ ಇವರು ಬರೆದ ಲೇಖನಗಳೂ, ಕವನಗಳೂ ಒಂದೇ ಎರಡೇ ನೂರಾರಿವೆ. ಜಿನಭಕ್ತಿಯೇ ಇವರ ಸ್ಫೂರ್ತಿಯ ಸೆಲೆ.

ಜೈನ ಜಗತ್ತು ಇವರಿಗೆ ಸ್ಯಾದ್ವಾದಿ, ಪಂಡಿತಶಿರೋಮಣಿ, ಶ್ರಾವಕರತ್ನ, ಶಾಸ್ತ್ರೀ- ಸ್ವಸ್ತಿ, ಜಿನವಾಣೀಭೂಷಣ, ಸದ್ಧರ್ಮಸಾಹಿತ್ಯ ಪ್ರಭಾಕರ. ಜಿನಧರ್ಮವಿಶಾರದ ಎಂದು ಮಹೋತ್ಸವಗಳಲ್ಲಿ ಬಿರುದುಗಳನ್ನು ಕೊಟ್ಟು ಕೊಂಡಾಡಿದೆ. ಇವರು ಆತ್ಮ ಕಲ್ಯಾಣವನ್ನು ಮರೆಯದೆ ಲೋಕ ಕಲ್ಯಾಣವನ್ನೂ ಮಡುತ್ತಿರುವರು. ಇಂಥವರನ್ನು ಅರಸಿಕೊಂಡು ಸಮವಸರಣವೇ ಬರುವುದು. ಧರ್ಮಪ್ರಭಾವನೆಗಾಗಿ ಇವರು ಅಭಿನವ ಸರ್ವಾಹ್ಣ ಯಕ್ಷರಾಗಿ ಉತ್ಸಾಹಗೊಂಡು ಮುನ್ನುಗ್ಗುವರು.

ಪರಿಗ್ರಹ ಪರಿಮಾಣ ವ್ರತಧಾರಿಯಾದ ಇವರು ತಮ್ಮಲ್ಲಿದ್ದ ೧೫೦೦ ಪುಸ್ತಕಗಳನ್ನು ಶ್ರವಣಬೆಳಗುಳದ ಶ್ರುತಕೀರ್ತಿ ಭಂಡಾರಕ್ಕೆ ಕೊಟ್ಟಿರುವರು. ಶ್ರುತಪಂಚಮಿಯಂದು ಅವನ್ನು ಪೂಜಿಸಲು ೫೦೦೦ ರೂ ಪುದವಟ್ಟನ್ನೂ ಶ್ರೀ ಮಠದಲ್ಲಿ ಇಟ್ಟಿರುವರು. ಜಿನಾಲಯ ಜಿನಮುನಿ, ಜೈನಶಾಸ್ತ್ರಗಳು ರಕ್ಷಣೆಗಾಗಿ ಇವರು ಆಗಾಗ ತೊರೆ ಬಿಟ್ಟ ಕಾಮಧೇನುವಾಗಿ ದಾನ ಮಾಡಿರುವರು. ಕ್ರೋಧ ,ಮಾನ , ಮಾಯ ,ಲೋಭಗಳ ಮೇಲೆ ಸದಾ ಕಣ್ಣಿಟ್ಟಿರುವ ಇವರು ಮೋಕ್ಷ ಮಾರ್ಗದ

ಶ್ರಾವಕ ಪಥಿಕರಾಗಿರುವರು. ಇವರ ಹೃದಯವೇ ಜಿನಮಂದಿರ .ಇವರ ವಾಣಿಯೇ ಅಭಿನವ ಜಿನವಾಣಿ. ಇವರ ಮಾರ್ಗವೇ ಅಭಿನವ ಮೋಕ್ಷಮಾರ್ಗ. ರಾಮಚಂದ್ರಪ್ಪನವರು ಇರುವುದರಿಂದ ತುಮಕೂರು ನಗರದಲ್ಲಿ ಅಭಿನವ ಸಮವಸರಣ ನೆಲೆಸಿದಂತಾಗಿದೆ.